ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 43 RNI Number : KNKAN/25/A2770 17-02-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :43 ರಾಯಚೂರು 17-02-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಉತ್ತರ ಕನ್ನಡದಲ್ಲಿ ಫೆ.17 ಮತ್ತು 18 ರಂದು ಉಷ್ಣ ಅಲೆ: ಬಳ್ಳಾರಿ, ಕಲಬುರಗಿಯಲ್ಲೂ ಅದೇ ಸ್ಥಿತಿ; ಜಿಲ್ಲಾಡಳಿತಗಳಿಂದ ಎಚ್ಚರಿಕೆ ರವಾನೆ

ಕಾರವಾರ: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜಿಲ್ಲೆಯಲ್ಲಿ ಫೆಬ್ರವರಿ 17 ಮತ್ತು 18 ರಂದು ಉಷ್ಣಾಂಶವು ಗರಿಷ್ಠ ಮಟ್ಟಕ್ಕೆ ಏರಿಕೆಯಾಗುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಲಕ್ಷ್ಮಿಪ್ರಿಯಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಜಿಲ್ಲೆಯ ಉಷ್ಣಾಂಶವು 34 ಡಿಗ್ರಿ ಸೆಲ್ಸಿಯಸ್ ನಿಂದ 38.9 ಡಿಗ್ರಿ ಸೆಲ್ಸಿಯಸ್ ವರೆಗೆ ಏರಿಕೆಯಾಗುವ ಸಾಧ್ಯತೆಯಿದೆ. ಇದು ಸಾಮಾನ್ಯ ತಾಪಮಾನಕ್ಕಿಂತ ಸುಮಾರು 3 ರಿಂದ 4 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿರಲಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ಎಚ್ಚರಿಸಲಾಗಿದೆ.

ಹೆಚ್ಚಿದ ಬಿಸಿಲಿನಿಂದಾಗಿ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು, ತಲೆಸುತ್ತು, ದೌರ್ಬಲ್ಯ, ಅತಿಯಾದ ಆಯಾಸ, ತಲೆನೋವು ಮತ್ತು ಚರ್ಮದ ಒಣಗುವಿಕೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ತೀವ್ರತರದ ಪ್ರಕರಣಗಳಲ್ಲಿ ಉಷ್ಣಾಘಾತ ಸಂಭವಿಸುವ ಸಾಧ್ಯತೆಯೂ ಇರುವುದರಿಂದ ಜಾಗರೂಕರಾಗಿರಲು ಸೂಚಿಸಲಾಗಿದೆ.

ಆರೋಗ್ಯದಲ್ಲಿ ಏರುಪೇರಾದಲ್ಲಿ ಅಥವಾ ಉಷ್ಣಾಘಾತದ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ. ಯಾವುದೇ ತುರ್ತು ಪರಿಸ್ಥಿತಿಗಾಗಿ ಜಿಲ್ಲಾ ಸಹಾಯವಾಣಿ 1077 ಅಥವಾ ವಾಟ್ಸಾಪ್ ಸಂಖ್ಯೆ 9483511015 ಅನ್ನು ಸಂಪರ್ಕಿಸಲು ಕೋರಲಾಗಿದೆ.

ಬೆಂಗಳೂರಿನಲ್ಲಿ ಹೇಗಿರಲಿದೆ ಹವಾಮಾನ?: ಬೆಂಗಳೂರಲ್ಲಿ ಕನಿಷ್ಠ ತಾಪಮಾನ 17 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ ತಾಪಮಾನ 31 ಡಿಗ್ರಿ ಸೆಲ್ಸಿಯಸ್ ಇದ್ದು, ಶುಭ್ರ ಆಕಾಶ ಹಾಗೂ ಬೆಳಗಿನ ಜಾವ ಮಂಜು ಮುಸುಕಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ಬೆಂಗಳೂರು ತಿಳಿಸಿದೆ. ಅಲ್ಲದೆ 1 ವಾರ ರಾಜ್ಯದಾದ್ಯಂತ ಒಣ ತೇವಾಂಶ ಇರಲಿದೆ ಎಂದು ಮಾಹಿತಿ ನೀಡಿದೆ.

ಉತ್ತರ ಒಳನಾಡಿನ ತಾಪಮಾನ ಏನಾಗಿರಲಿದೆ?: ಬೆಳಗಾವಿ, ಬೀದರ್, ವಿಜಯಪುರ,ಬಾಗಲಕೋಟೆ, ಧಾರವಾಡ, ಗದಗ, ಕಲಬುರಗಿ (34.6), ಹಾವೇರಿ, ಕೊಪ್ಪಳ. ರಾಯಚೂರಲ್ಲಿ ಗರಿಷ್ಠ ತಾಪಮಾನವು 33 ರಿಂದ 31 ಡಿಗ್ರಿ ಸೆಲ್ಸಿಯಸ್ ಆಸುಪಾಸಲ್ಲಿದೆ. ಹಾಗೂ ಕನಿಷ್ಠ ತಾಪಮಾನವು 13.8

3ನೇ ಪುಟಕ್ಕೆ

ಹಿರಿಯ ಪತ್ರಕರ್ತ ದಿ. ಸೈಯದ್ ಅಶ್ರಫ್ ಕುಟುಂಬಕ್ಕೆ 1 ಲಕ್ಷ ನೆರವು

ರಿಪೋರ್ಟರ್ಸ್ ಗಿಲ್ಡ್ ಕಾರ್ಯ ಶ್ಲಾಘನೀಯ- ಸಲೀಂ ಅಹ್ಮದ್



ರಾಯಚೂರು, ಫೆ.16-

ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತ ದಿ. ಸೈಯದ್ ಅಶ್ರಫ್ ಅವರ ಕುಟುಂಬಕ್ಕೆ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ವತಿಯಿಂದ ಪತ್ರಕರ್ತರ ತುರ್ತು ನಿಧಿಯಿಂದ ?1 ಲಕ್ಷ ರೂಪಾಯಿ ನೆರವು ನೀಡಲಾಯಿತು.

ನಗರದ ಗಿಲ್ಡ್‌ನ ಪತ್ರಿಕಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ಮೃತರ ಕುಟುಂಬಕ್ಕೆ ಚೆಕ್ ವಿತರಿಸಿ ಮಾತನಾಡಿದರು. ಪತ್ರಕರ್ತರು ಸಮಾಜದ ಎರಡು ಕಣ್ಣುಗಳಂತೆ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ತಪ್ಪುಗಳನ್ನು ಎತ್ತಿಹಿಡಿಯು ವುದಲ್ಲದೆ ಜನರ ಸಮಸ್ಯೆಗಳನ್ನು ಆಡಳಿತದ ಗಮನಕ್ಕೆ ತರುವ ಮಹತ್ವದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೃತ ಪತ್ರಕರ್ತರ ಕುಟುಂಬಕ್ಕೆ ನೆರವು ನೀಡುತ್ತಿರುವ ರಿಪೋರ್ಟರ್ಸ್ ಗಿಲ್ಡ್ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು.

ರಿಪೋರ್ಟರ್ಸ್ ಗಿಲ್ಡ್‌ನ ತುರ್ತು ನಿಧಿಗೆ ಹೆಚ್ಚಿನ ಅನುದಾನ ಒದಗಿಸುವ ಕುರಿತು ಮುಖ್ಯಮಂತ್ರಿ ಹಾಗೂ ಮಾಧ್ಯಮ ಸಲಹೆಗಾರರೊಂದಿಗೆ ಚರ್ಚೆ ನಡೆಸಲಾಗುವುದು. ಗಿಲ್ಡ್‌ನ ಬೆಳ್ಳಿಮಹೋತ್ಸವ ಕಾರ್ಯಕ್ರಮಕ್ಕೂ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಪತ್ರಕರ್ತರ ಹಿತಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಮಾತನಾಡಿ, ಸೈಯದ್ ಅಶ್ರಫ್ ವಾರಕ್ಕೆ ಒಂದೆರಡು ಬಾರಿ ಹೈದರಾಬಾದ್‌ಗೆ ತೆರಳಿ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದರು. ಕುಟುಂಬದ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದ ಅವರು ಕೆಲಸದ ಒತ್ತಡದ ನಡುವೆಯೇ

3ನೇ ಪುಟಕ್ಕೆ

ಶಾಸಕಿ ವಿರುದ್ಧ ಜೆಡಿಎಸ್ ಅತೃಪ್ತರ ಆಕ್ರೋಶ: ಭರವಸೆ ಈಡೇರಿಸದಿದ್ದರೆ ಸೋಲಿಸುವ ಎಚ್ಚರಿಕೆ



ರಾಯಚೂರು,ಫೆ.16-

ದೇವದುರ್ಗ ಶಾಸಕಿ ಕರೆಮ್ಮ ಜಿ ನಾಯಕ್ ಅವರು ವಿಧಾನಸಭಾ ಚುನಾವಣೆಯಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲರಾಗಿದ್ದು, ಪಕ್ಷಕ್ಕಾಗಿ ದುಡಿದ ನಿಷ್ಠಾವಂತ ನಾಯಕರನ್ನು ಕಡೆಗಣಿಸಿ ಕಾರ್ಯಕರ್ತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದ್ದಾರೆ ಎಂದು ದೇವದುರ್ಗ ಜೆಡಿಎಸ್ ತಾಲೂಕು ಅಧ್ಯಕ್ಷ ಬುಡ್ಡನಗೌಡ ಜಾಗಟಗಲ್ ಆರೋಪಿಸಿದರು.

ಈ ಕುರಿತು ಪಕ್ಷದ ವರಿಷ್ಠರಿಗೆ ದೂರು ನೀಡಲಾಗಿದ್ದು, ಸಮಸ್ಯೆ ಸರಿಪಡಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿಯನ್ನು ಸೋಲಿಸಲಾಗುವುದು ಎಂದು ಎಚ್ಚರಿಸಿದರು.

ನಗರದ ಅತ್ತನೂರು ಫಂಕ್ಷನ್ ಹಾಲ್‌ನಲ್ಲಿ ಸೋಮವಾರ ಜೆಡಿಎಸ್ ಅತೃಪ್ತ ಕಾರ್ಯಕರ್ತರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ತಾಲೂಕಿನ ಅಭಿವೃದ್ಧಿಗೆ ದೇವೇಗೌಡರ ಕೊಡುಗೆ ಅಪಾರವಾಗಿದೆ. ಸಾಮಾನ್ಯಳಾದ ಕರೆಮ್ಮ ನಾಯಕ ಅವರನ್ನು ನಾಲ್ಕು ಬಾರಿ ಶಾಸಕರಾಗಿದ್ದ, ಮಾಜಿ ಸಚಿವ ಶಿವನಗೌಡ ನಾಯಕ ಅವರನ್ನು ಸೋಲಿಸುವಲ್ಲಿ ಪಕ್ಷದ ಕಾರ್ಯಕರ್ತರು ಮಹತ್ವದ ಪಾತ್ರ ವಹಿಸಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕರೆಮ್ಮ ಜಿ ನಾಯಕ್ ಗೆಲುವು ಸಾಧಿಸಲು ಎಲ್ಲರೂ ಶ್ರಮಿಸಿದ್ದೇವೆ ಎಂದರು.

ಚುನಾವಣೆಯ ವೇಳೆ ಅಕ್ರಮ ಮರಳುಗಾರಿಕೆ, ಮಟ್ಕಾ, ಜೂಜಾಟ, ಇಸ್ಪೀಟ್ ತಡೆ, ಅರಕೇರಾ ತಾಲೂಕು ಕೇಂದ್ರ ರದ್ದು, ಟೇಲ್‌ಎಂಡ್ ರೈತರಿಗೆ ನೀರು ಸೇರಿದಂತೆ ಹಲವು ಮೂಲಭೂತ ಸೌಕರ್ಯ ಒದಗಿಸುವ ಭರವಸೆ ನೀಡಲಾಗಿತ್ತು. ತಮ್ಮ ಕುಟುಂಬದವರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ಪ್ರಮಾಣ ಮಾಡಲಾಗಿತ್ತು. ಆದರೆ, ಗೆಲುವಿನ ಬಳಿಕ ಭರವಸೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ಜೆಡಿಎಸ್ ನಾಯಕರನ್ನು ಬದಿಗೊತ್ತಿ ಬಿಜೆಪಿ ಕಾರ್ಯಕರ್ತರ ಪರ ಒಲವು ತೋರಲಾಗುತ್ತಿದೆ. ಹೊಂದಾಣಿಕೆ ರಾಜಕಾರಣದಿಂದ ಮತದಾರರು ನಿರಾಶರಾಗಿದ್ದಾರೆ. ಪಕ್ಷವನ್ನು ದುರ್ಬಲಗೊಳಿಸಲು ಅವಕಾಶ ನೀಡುವುದಿಲ್ಲ. ಪ್ರತಿಯೊಬ್ಬ ಕಾರ್ಯಕರ್ತರ ಮನೆಗೆ ಭೇಟಿ ನೀಡಿ ಪಕ್ಷವನ್ನು ಬಲಪಡಿಸುವ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಲ್ಯಾಂಡ್ ಆರ್ಮಿ ಯೋಜನೆಯಡಿ ಅಭಿವೃದ್ಧಿ

3ನೇ ಪುಟಕ್ಕೆ

ಜಿಲ್ಲಾಡಳಿತದಿಂದ ಶ್ರೀ ಸಂತ ಸೇವಾಲಾಲ್ ಜಯಂತ್ಯುತ್ಸವ ಸಂತ ಸೇವಾಲಾಲರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಡಾ.ಹಂಪಣ್ಣ ಸಜ್ಜನ್ ಸಲಹೆ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು, ಫೆ.16-

ಸಂತ ಸೇವಾಲಾಲ್‌ರು ಬಂಜಾರ ಸಮಾಜದ ಪವಾಡ ಪುರುಷ ಸಮಾಜದಲ್ಲಿನ ಮೌಢ್ಯತೆ ತೊಡೆದು ಹಾಕಿದ ಸಂತ.ಸಂತ ಶ್ರೀ ಸೇವಾಲಾಲ ಮಹಾರಾಜರ ಚಿಂತನೆ, ಆದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ ತಿಳಿಸಿದರು.

ನಗರದಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಹಯೋಗದಲ್ಲಿ ಆಯೋಜಿಸಿದ್ದ ಸಂತ ಸೇವಾಲಾಲ್ ಜಯಂತಿ ಆಚರಣೆಯಲ್ಲಿ ಮಾತನಾಡಿದ ಅವರು ಬಂಜಾರ ಸಮಾಜದ ಉದ್ದಾರಕ್ಕೆ ಉದಯಿಸಿದ ಸಂತಸೇವಾಲಾಲ್ ಅವರು ಸತ್ಯ, ಅಹಿಂಸೆಯನ್ನು ಬೋಧಿಸಿದರು.

ತಪಸ್ಸು, ಧ್ಯಾನ ಮತ್ತು ಭಕ್ತಿ

3ನೇ ಪುಟಕ್ಕೆ

ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಗಾರ



ರಾಯಚೂರು,ಫೆ.16-

ಪ್ರತಿಯೊಬ್ಬ ಭಾರತೀಯರು ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯುವುದು ಸಂವಿಧಾನದ ಆಶಯವಾಗಿದೆ. ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ಸರ್ಕಾರದ ಸವಲತ್ತು ಮುಟ್ಟಿಸುವ ಕೆಲಸವನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ಮಾಡಬೇಕೆಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಮಹಾವರಕರ್ ಗುಲ್ಜರ್ ಲಾಲ್ ಅವರು ಹೇಳಿದರು.

ಫೆ.16ರ ಸೋಮವಾರ ದಂದು ನಗರದ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಔಟ್ ಲಾಡ್ ಇಂಡಿಯಾ ಸಂಸ್ಥೆ ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ 4 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರು ಅನುಭವಿಸುತ್ತಿರುವ ಸ್ವಾತಂತ್ರ್ಯವು ದೇಶದ ಸಂವಿಧಾನ ನೀಡಿರುವ ಅಧ್ಬುತ

3ನೇ ಪುಟಕ್ಕೆ

ಅದ್ದೂರಿಯಾಗಿ ಸಂತ ಸೇವಾಲಾಲರ 287 ನೇ ಜಯಂತಿ ಆಚರಣೆ



ಸಿರವಾರ.ಫೆ.16-

ಭಾರತ ನೆಲದಲ್ಲಿ ಹಲವು ಸಂತರು, ಧರ್ಮ ಸುಧಾರಕರು, ತತ್ವಜ್ಞಾನಿಗಳು ಜನರಲ್ಲಿನ ಮೌಢ್ಯಗಳನ್ನು ಹೋಗಲಾಡಿಸಿದ್ದಾರೆ. ಇಂತವರಲಿ ಲಂಬಾಣಿ ಸಮುದಾಯದ ಆರಾಧ್ಯ ದೈವ ಸದ್ಗುರು ಸಂತ ಸೇವಾಲಾಲ್ ಒಬ್ಬರು. ಸಮಾಜದವರಾದ ತಾವು ಮಕ್ಕಳಿಗೆ ಶಿಕ್ಷಣ ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಮಾಜಿ ಶಾಸಕರಾದ ರಾಜಾ ವೆಂಕಟಪ್ಪನಾಯಕ ಹೇಳಿದರು.

ಪಟ್ಟಣದ ಸಜ್ಜಲಶ್ರೀ ಶಾಖಾ ಮಠದಲ್ಲಿ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘದಿಂದ ಹಮ್ಮಿಕೊಂಡಿದ ಶ್ರೀ ಸಂತ ಸೇವಾಲಾಲರ 287 ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಮಹನೀಯರ ಜಯಂತಿಗಳು ಕೇವಲ ಆಚರಣೆಗಳಲ್ಲ. ಅವು ಸಮಾಜದ ಒಗ್ಗಟ್ಟು ಮತ್ತು ಶಕ್ತಿಯನ್ನು ಪ್ರತಿಬಿಂಬಿಸುವ ಸಂಕೇತಗಳಾಗಿವೆ. ಸತ್ಯ, ಅಹಿಂಸೆ ಮತ್ತು ತ್ಯಾಗದ ಮೂಲಕ ಜನಮಾನಸದಲ್ಲಿ ಗುರುಸ್ಥಾನ ಪಡೆದವರು.


ಹಿರಿಯ ಮುಖಂಡ ಚುಕ್ಕಿ ಸೂಗಪ್ಪ ಸಾಹುಕಾರ ಮಾತನಾಡಿ ಸೇವಾಲಾಲರು ಧಾರ್ಮಿಕ ರಾಯಭಾರಿಯಾಗಿ, ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಲು ಶಿಕ್ಷಣವೇ ಪ್ರಮುಖ ಸಾಧನ. ಶಿಕ್ಷಣದ ಮಹತ್ವವನ್ನು ಸಾರುವ ಮೂಲಕ ಎಲ್ಲರೂ ಶಿಕ್ಷಿತರಾಗಿ ಅಕ್ಷರ ಜ್ಞಾನವನ್ನು ಪಡೆದು ಜಗತ್ತಿಗೆ ದಾರಿ ದೀಪವಾಗಿ ಎಂದು ಹೇಳಿದರು. ಬಿಜೆಪಿ ಹಿರಿಯ ಮುಖಂಡ ಜೆ.ಶರಣಪ್ಪಗೌಡ ಮಾತನಾಡಿ ಸೇವಾ ಲಾಲರು ತಮ್ಮ ತತ್ವಗಳ ಮೂಲಕ ಲೋಕಕ್ಕೆ ಜ್ಞಾನದ ಮೂಲಕ ಮುಕ್ತಿ ಮಾರ್ಗ ತೋರಿಸಿದರು. ಸರ್ವರನ್ನು ಒಳಗೊಂಡ ಸಮ ಸಮಾಜದ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವನೆಯನ್ನು ಮೂಡಲು ಪ್ರೇರೇಪಿಸಿದರು.

ತನ್ನ ಸಮಾಜದ ಜನರ ಕಷ್ಟಕ್ಕಾಗಿ ತಮ್ಮ ಪ್ರಾಣಾರ್ಪಣೆಗೂ ಸಿದ್ದರಾಗಿದ್ದರು. ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ ಮಾತನಾಡಿ ಹಲವು ಮಹನೀಯರ ವಿಚಾರಧಾರೆಗಳನ್ನು ನಾವುಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಜಯಂತಿಗಳು ಅರ್ಥಪೂರ್ಣವಾಗುತ್ತದೆ. ಇಂತಹ ಮಹನೀಯರನ್ನು ಒಂದು ಜಾತಿ ಅಥವಾ ಧರ್ಮಕ್ಕೆ ಮೀಸಲಾಗಿಸದೇ ಸರ್ವರ ಸಾಂಸ್ಕೃತಿಕ ಹಾಗೂ ಧಾರ್ಮಿಕ ರಾಯಭಾರಿಗಳಾಗಿ ಸ್ವೀಕರಿಸಿದಾಗ ಮಾತ್ರವೇ ಸಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

ಬಂಜಾರ ಸಮಾಜದ ವಸ್ತ್ರಗಳು ರಾಷ್ಟಮಟ್ಟದಲ್ಲಿ ಹೆಸರುವಾಸಿಯಾಗಿವೆ ಎಂದರು. ಪ.ಪಂ ಉಪಾಧ್ಯಕ್ಷೆ ಲಕ್ಷ್ಮಿ ಆದೆಪ್ಪ ನಾಯಕ, ಟಿ ಮಲ್ಲಿಕಾರ್ಜುನ ಗೌಡ ಬಲ್ಲಟಗಿ,

3ನೇ ಪುಟಕ್ಕೆ

ಗೃಹ ಆರೋಗ್ಯ ಯೋಜನೆಯ ಮಹತ್ವ ಅರಿಯೋಣ: ಡಾ.ಸುರೇಂದ್ರ ಬಾಬು ಸಲಹೆ



ರಾಯಚೂರು,ಫೆ.16-

ಆರ್ಥಿಕ ತೊಂದರೆಯುಳ್ಳ ನಗರದ ಪ್ರದೇಶದ ಜನತೆಗೂ ಸಹ ಶೀಘ್ರದಲ್ಲಿಯೇ ಗೃಹ ಆರೋಗ್ಯ ಯೋಜನೆಯನ್ನು ವಿಸ್ತರಿಸಿ ಸೌಲಭ್ಯ ಒದಗಿಸುವುದಕ್ಕೆ ಅಗತ್ಯ ಸಿದ್ಧತೆ ಕೈಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಫೆ.16ರ ಸೋಮ ವಾರ ನಗರದ ಜಿಲ್ಲಾ ಆರೋಗ್ಯ ತರಬೇತಿ ಸಭಾಂ ಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ವಿಭಾಗದಿಂದ ವಿವಿಧ ವೈದ್ಯಾಧಿಕಾರಿಗಳಿಗೆ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಹಮ್ಮಿಕೊಳ್ಳಲಾಗಿದ್ದ ಗೃಹ ಆರೋಗ್ಯ ಯೊಜನೆಯ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ಸರಕಾರವು ಆರೋಗ್ಯ ಸೇವೆ-ಮನೆ ಬಾಗಿಲಿಗೆ ಎಂಬ ಧ್ಯೇಯದಡಿ ಜೀವನ ಶೈಲಿಯ ಖಾಯಿಲೆಗಳಾದ ರಕ್ತದೊತ್ತಡ, ಸಕ್ಕರೆ ಖಾಯಿಲೆ ಜೊತೆ ಜೊತೆಗೆ ಕ್ಯಾನ್ಸರ್ ಪತ್ತೆ ಹಾಗೂ ಚಿಕಿತ್ಸೆ ಸೇರಿದಂತೆ 14 ವಿವಿಧ ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಿದಂತೆ ನಗರದ ಪ್ರದೇಶದ ಆರ್ಥಿಕ ತೊಂದರೆಯುಳ್ಳ ಜನತೆಗೂ ಸಹ ಶೀಘ್ರದಲ್ಲಿಯೇ ಒದಗಿಸಲು ನಿರ್ಧರಿಸಲಾಗಿದ್ದು, ಈ ದಿಶೆಯಲ್ಲಿ ಎಲ್ಲರೂ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ತರಬೇತಿಯ ಮಹತ್ವ ಪಡೆದುಕೊಳ್ಳಬೇಕು ಎಂದರು.

ಆರ್ಥಿಕ ದುರ್ಬಲ ವರ್ಗದದವರಿಗೆ ಮನೆ ಮಟ್ಟದಲ್ಲೇ ಆರೋಗ್ಯದ ಸೌಲಭ್ಯ ದೊರಕಿಸಿ ಅವರ ಕುಟುಂಬಕ್ಕಾಗುವ ಆರ್ಥಿಕ ಹೊರೆಯನ್ನು ದೂರಮಾಡಲು ಗೃಹ ಆರೋಗ್ಯದಡಿ ಅಧಿಕ ರಕ್ತದೊತ್ತಡ, ಮಧುಮೇಹ, ಮೂತ್ರ ಪಿಂಡದ ಖಾಯಿಲೆ, ಲಿವರ ಸಮಸ್ಯೆ, ಕ್ಯಾನ್ಸರ್, ತಾಯಿ ಮಗುವಿನ ಆರೋಗ್ಯ, ರಕ್ತ ಹೀನತೆ, ಮಾನಸಿಕ ಕಾಯಿಲೆ, ಕ್ಷಯರೋಗ ಲಕ್ಷಣಗಳು ಮುಂತಾದವುಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆಯನ್ನು ಕೊಡಿಸುವ ಮಹತ್ವಾಕಾಂಕ್ಷಿ ಉದ್ದೇಶವನ್ನು ತರಬೇತಿಯಲ್ಲಿ ಅರ್ಥೈಸಿಕೊಂಡು ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್.ಎನ್., ಡಿಪಿಡಿಓ ಡಾ.ಚಂದ್ರಶೇಖರಯ್ಯ ಸ್ವಾಮಿ, ತಜ್ಞ ವೈದ್ಯರಾದ ಡಾ.ಶ್ರೀನಿವಾಸ್, ಡಾ.ವಂದನಾ, ಡಾ.ಮನೋಹರ ಪತ್ತಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ್ ಹುಕ್ಕೇರಿ, ಡಿಹೆಚ್‌ಇಓ ಈಶ್ವರ ಹೆಚ್.ದಾಸಪ್ಪನವರ, ಡಿಡಿಎಮ್ ಲೋಕೇಶ್, ಡಿವೈಹೆಚ್‌ಇಓ ಬಸಯ್ಯ, ಜಿಲ್ಲಾ ಆಶಾ ಮೇಲ್ವಿಚಾರಕಿ ಶಾರೂನ್, ಬಿಹೆಚ್‌ಇಓ ಸರೋಜಾಕೆ, ಹಿರಿಯ ಹೆಚ್‌ಐಓ ಸುರೇಶ್, ಆಶಾ ಮೇಲ್ವಿಚಾರಕಿ ಮರಿಯಾಳಮ್ಮ ಸೇರಿದಂತೆ ಇತರರು ಇದ್ದರು.



ತಹಸೀಲ್ದಾರ ಕಛೇರಿಯಿಂದ ಸಂತ ಸೇವಾಲಾಲ್ ಭಾವಚಿತ್ರ ಮೆರವಣಿಗೆ

ಸಿರವಾರ.ಫೆ.16 -

ಸಮಾಜದ ಉದ್ದಾರಕ್ಕೆ ಉದಯಿಸಿದ ದೆ?ವಿಪುರುಷ ಸಂತ ಸೇವಾಲಾಲ್ ಸತ್ಯ , ಅಹಿಂಸೆಯನ್ನು ಬೋಧಿಸಿದ್ದರು ಎಂದು ತಹಸೀಲ್ದಾರ ಅಶೋಕ ಪವಾರ ಹೇಳಿದರು.

ಪಟ್ಟಣದ ತಹಸೀಲ್ದಾರ ಕಛೇರಿಯಲ್ಲಿ ಸಂತ ಸೇವಾಲಾಲರ 287 ನೇ ಜಯಂತಿ ಅಂಗವಾಗಿ

3ನೇ ಪುಟಕ್ಕೆ

ಸಂತ ಸೇವಾಲಾಲ್ ಜಯಂತಿ: ಅದ್ದೂರಿ ಭಾವಚಿತ್ರದ ಮೆರವಣಿಗೆ

ಸಮಾಜಕ್ಕೆ ಜೀವನಾದರ್ಶರಾದವರು ಸೇವಾಲಾಲರು : ಗದ್ದಿಗೌಡರ



ಬಾಗಲಕೋಟೆ, ಫೆ.16-

ತಮ್ಮ ಭಕ್ತಿ, ಧ್ಯಾನದ ಮೂಲಕ ಇಡೀ ಸಮಾನಕ್ಕೆ ಜೀವನಾದರ್ಶವಾಗಿದ್ದವರು ಸಂತ ಶ್ರೀ ಸೇವಾಲಾಲ್‌ರು ಎಂದು ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಹೇಳಿದರು.

ನವನಗರದ ಕಲಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಸಂತ ಸೇವಾಲಾಲ್‌ರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ, ಮಾತನಾಡಿದ ಅವರು ಸಮಾಜದಲ್ಲಿಯ ಮೂಡನಂಬಿಕೆಯನ್ನು ಹೋಗಲಾಡಿಸಿ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ದಿ ಹೊಂದಲು ತಮ್ಮ ಆದ್ಯಾತ್ಮಿಕ ಶಕ್ತಿಯಿಂದ ಜನರಲ್ಲಿ ತಿಳುವಳಿಕೆ ನೀಡಲು ಮುಂದಾದವರು ಸೇವಾಲಾಲ್‌ರು ಎಂದು ತಿಳಿಸಿದರು. ಸತ್ಯ, ಅಹಿಂಸೆ ಮಾರ್ಗದಲ್ಲಿ ನಡೆದಾಗ ಜೀವನದಲ್ಲಿ ಸನ್ಮಾರ್ಗದ ಜೀವನ ನಡೆಸಲು ಸಾಧ್ಯವೆಂಬುದನ್ನು ತಿಳಿಸುವ ಮೂಲಕ ಜನರಲ್ಲಿ ಸನ್ಮಾರ್ಗದ ಹಾದಿಯಲ್ಲಿ ನಡೆಯುವಂತೆ ಮಾಡಿದವರು. ಸೇವಾಲಾಲ್‌ರ ಭಕ್ತಿಯಿಂದ ಪೂಜಿಸಿ ಅವರ ಮಾರ್ಗದಲ್ಲಿ ನಡೆದಾಗ ಮಾತ್ರ ಉತ್ತಮವಾದ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಅವರ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ ಸಂತ ಸೇವಾಲಾಲರು ಯೋಗಿ, ಮಹಾಸಂತರಾಗಿ ಲೋಕಕಲ್ಯಾಣಕ್ಕಾಗಿ ಶ್ರಮಿಸಿದವರು. ಅನ್ಯಾಯದ ವಿರುದ್ದ ಹೋರಾಟ ಮಾಡಿದವರು. ಸರ್ವರನ್ನು ಒಳಗೊಂಡ ಸಮ ಸಮಾಜ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವವನ್ನು ಮೂಡಿಸಲು ಪ್ರೇರೇಪಿಸಿದವರು. ತಮ್ಮ ತತ್ವ ಹಾಗೂ ಜ್ಞಾನದ ಮೂಕಲ ಲೋಕಕ್ಕೆ ಮುಕ್ತು ಮಾರ್ಗವನ್ನು ತೋರಿಸುವ ಮೂಲಕ ಜನರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿದ್ದಾರೆ ಎಂದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ ಸತ್ಯ, ಅಹಿಂಸೆ, ತ್ಯಾಗದ ಮನೋಭಾವದ ನೀತಿಗಳನ್ನು ತಮ್ಮ ವಚನ, ಉಪದೇಶಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಜಗತ್ತಿಗೆ ಮಾರ್ಗದರ್ಶಕರಾದವರು ಸೇವಾಲಾಲ್‌ರು. ಅಂಧಶ್ರದ್ದೆ, ಅನ್ಯಾಯ, ಅಸಮಾನತೆ ವಿರುದ್ದ ಹೋರಾಟ ಮಾಡಿದ್ದಾರೆ. ಬಂಜಾರ ಸಮಾಜ ಧರ್ಮ, ಸಂಸ್ಕೃತಿ, ಪರಂಪರೆಗೆ ಹೆಸರುವಾಸಿಯಾದವರು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಸಂತ ಸೇವಾಲಾಲರು ಸಮಾನತೆ ಮತ್ತು ಮಾನವೀಯತೆ, ಸತ್ಯ, ಧರ್ಮಪಾಲನೆ, ಮಧ್ಯಪಾನ, ಅಂಧಶ್ರದ್ದೆ ವಿರೋದ ಹಾಗೂ ಶಿಕ್ಷಣ ಮತ್ತು ನೈತಿಕ ಜೀವನದ ಮಹತ್ವವನ್ನು ಸಮಾಜಕ್ಕೆ ಸಾರಿದವರು ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅದ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾನ್ ಸಂತ ಸೇವಾಲಾಲ್‌ರ ಜಯಂತಿ ಕೇವಲ ಆಚರಣೆ ಸೀಮಿತವಾಗಿರದೇ ಅವರ ಮಾರ್ಗದರ್ಶನದಂತೆ ನಡೆದಲ್ಲಿ ಉತ್ತಮ ಜೀವನ ಸಾಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಉಪನ್ಯಾಸಕರಾಗಿ ಆಗಮಿಸಿದ್ದ ಸಾಹಿತಿ ಹಾಗೂ ಸಾಮಾಜಿಕ ಕಾರ್ಯಕರ್ತ ಸ್ವಂತತ್ರ ಸಿಂಧೆ ಸೇವಾಲಾಲರ ಜೀವನ ಚರಿತ್ರೆ ಕುರಿತು ವಿವರವಾಗಿ ತಿಳಿಸಿದರು.

ಕುಮಾರ ಮಹಾರಾಜರು, ವಿಷ್ಣು ಮಹಾರಾಜರು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ತಹಶೀಲ್ದಾರ ವಾಸುದೇವ ಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾನ ಸೇರಿದಂತೆ ಸಮುದಾಯದ ಮುಖಂಡರಾದ ರಂಗನಗೌಡ ಗೌಡರ, ಹೂವಪ್ಪ ರಾಠೋಡ, ನಿಂಗಪ್ಪ ಚವ್ಹಾಣ, ರತ್ನಪ್ಪ ರಾಠೋಡ, ಹನಮಂತ ರಾಠೋಡ ಹಾಗೂ ಇತರರು ಉಪಸ್ಥಿತರಿದ್ದರು.

ಸೇವಾಲಾಲರ ಅದ್ದೂರಿ ಭಾವಚಿತ್ರದ ಮೆರವಣಿಗೆ

ಸಂತ ಸೇವಾಲಾಲರ ಜಯಂತಿ ಅಂಗವಾಗಿ ಜಿಲ್ಲಾಡಳಿತ ಭವನದಿಂದ ಹಮ್ಮಿಕೊಂಡ ಅವರ ಭಾವಚಿತ್ರದ ಮೆರವಣಿಗೆಗೆ ಸಂಸದ ಪಿ.ಸಿ.ಗದ್ದಿಗೌಡ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಚಾಲನೆ ನೀಡಿದರು. ಮೆರವಣಿಗೆ ವಿವಿಧ ಜಾನಪದ ಕಲಾತಂಡಗೊಂದಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆಗಳಲ್ಲಿ ಸಂಚರಿಸಿ ಕೊನೆಗೆ ಕಲಾಭವನಕ್ಕೆ ಮುಕ್ತಾಯಗೊಂಡಿತು. ಪೂರ್ಣಕುಂಬ ಹೊತ್ತ ಮಹಿಳೆಯರು ಆಕರ್ಷಣೀಯ ಕೇಂದ್ರ ಬಿಂದು ಆಗಿದ್ದರು.



ಕರ್ನಾಟಕ ದರ್ಶನ ಪ್ರವಾಸಕ್ಕೆ ಡಿಸಿ ಚಾಲನೆ

ಬಾಗಲಕೋಟೆ: ಫೆ.16-

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ರವಿವಾರ ಚಾಲನೆ ನೀಡಿದರು.

ಜಿಲ್ಲಾಡಳಿತ ಭವನದ ಮುಖ್ಯ ಆವರಣದಲ್ಲಿ ಪ್ರಸಕ್ತ ಸಾಲಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮದಿಂದ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜಿಲ್ಲೆಯ ವಿವಿಧ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜ್ಯದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪಠ್ಯದಲ್ಲಿರುವ ಇತಿಹಾಸವನ್ನು ನೇರವಾಗಿ ನೋಡಿದಾಗ ಅದರ ಅರಿವು ಮತ್ತಷ್ಟು ಗಾಡವಾಗುತ್ತದೆ. ಕರ್ನಾಟಕದ ವೈಭವಶಾಲಿ, ಸಂಸ್ಕೃತಿ, ಕಲೆ ಮತ್ತು ಪರಂಪರೆಯನ್ನು ಅರಿಯಲು ಈ ಪ್ರವಾಸ ಸಹಕಾರಿಯಾಗಿಲಿದೆ ಎಂದರು.

ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ ಮಾತನಾಡಿ ಕರ್ನಾಟಕ ದರ್ಶನ ಪ್ರವಾಸ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದು, ಜಿಲ್ಲೆಯ ಎಲ್ಲ ತಾಲೂಕಿನ ಪ್ರೌಢಶಾಲೆಯ ಪರಿಶಿಷ್ಟ ಜಾತಿಯ 266, ಪರಿಶಿಷ್ಟ ಪಂಗಡದ 168 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಬಾಗಲಕೋಟೆ ತಾಲೂಕಿನ 74 ಮತ್ತು ಬೀಳಗಿ ತಾಲೂಕಿನ 72 ಸೇರಿ ಒಟ್ಟು 146 ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ಬಾದಾಮಿ ಮತ್ತು ಹುನಗುಂದ ತಾಲೂಕಿನ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರವಾಸದ ವೇಳೆಯಲ್ಲಿ ಶಿರಸಿ, ಬನವಾಸಿ, ಗೋಕರ್ಣ, ಮುರುಡೇಶ್ವರ, ಆನೆಗುಂದಿ, ಉಡುಪಿ, ಶ್ರವಣಬೆಳಗೊಳ, ಬೇಲೂರ, ಯಡೆಯೂರು ತಾಣಗಳ ದರ್ಶನ ಮಾಡಲಿದ್ದಾರೆಂದು ತಿಳಿಸಿದರು. ಜಮಖಂಡಿ ಮುಧೋಳ ತಾಲೂಕಿನ ವಿದ್ಯಾರ್ಥಿಗಳಿಗೆ ಫೆಬ್ರವರಿ 16 ರಿಂದ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಸೇವಾಲಾಲ್‌ರ ವಿಚಾರಧಾರೆಗಳು ಯುವ ಪೀಳಿಗೆಗೆ ದಿಕ್ಕು ತೋರಿಸುವ ದೀಪವಾಗಿದೆ-ಸಚಿವ ಈಶ್ವರ ಬಿ.ಖಂಡ್ರೆ

ಬೀದರ, ಫೆ.16-

ಸಂತ ಸೇವಾಲಾಲ್ ಮಾಹಾರಾಜರ ವಿಚಾರಧಾರೆಗಳನ್ನು ಯುವ ಪೀಳಿಗೆಗೆ ದಿಕ್ಕು ತೋರಿಸುವ ದೀಪವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ರವಿವಾರ ಜಿಲ್ಲಾಧಿಕಾರಿ ಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಸಂತ ಸೇವಾಲಾಲ್‌ರ 287ನೇ ಜಯಂತ್ಯೋತ್ಸವ ಅಂಗವಾಗಿ ಸಂತ ಸೇವಾಲಾಲ ಮಹಾರಾಜನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಅನ್ಯಾಯ ಅಂಧಶ್ರದ್ಧೆಗಳ ವಿರುದ್ಧ ಹೋರಾಡಿ ಸಮಾನತೆ, ಶಿಕ್ಷಣ ಹಾಗೂ ಆತ್ಮಗೌರವದ ಸಂದೇಶ ನೀಡಿದ ಸಂತ ಸೇವಾಲಾಲ್ ಮಹಾರಾಜರ ಆದರ್ಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ. ಸಂತ ಸೇವಾಲಾಲ ಮಹಾರಾಜರು ಮಹಾನ್ ಪವಾಡ ಪುರುಷರಾಗಿದ್ದರು, ಅವರು ಜನರ ಸಮಸ್ಯೆಗಳನ್ನು ಆಲಿಸಿಸುತ್ತಿದ್ದರು, ಮೂಡನಂಬಿಕೆ, ಕೆಟ್ಟ ಆಚರಣೆಗಳ ವಿರುದ್ಧ ಧ್ವನಿ ಎತ್ತಿದರು ಮತ್ತು ಜನರಿಗೆ ತಿಳಿವಳಿಕೆ ಮೂಡಿಸಿದರು. ಸಮಾಜದ ಐಕ್ಯತೆ ಮತ್ತು ಸಹಬಾಳ್ವೆಗೆ ಪ್ರೇರೆಪಿಸಿದರು. ಬ್ರಿಟಿಷರು ತೆರಿಗೆ ಹೆಚ್ಚಳ ಮಾಡಿದಾಗ ವೀರ ಸೇನಾನಿಯಾಗಿ ಹೋರಾಡಿದರು. ಯಾವುದೇ ಮಹಾನ ಪುರುಷರು ಒಂದೇ ಜಾತಿಗೆ ಸಿಮಿತವಿಲ್ಲ. ಅವರು ಮಾನವ ಕುಲಕ್ಕೆ ಸುಧಾರಣೆಗೆ ಪ್ರಯತ್ನಿಸಿದವರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಸೇರಿದಂತೆ ಜಿಲ್ಲಾ ಬಂಜಾರಾ ಸಮಾಜದ ಅಧ್ಯಕ್ಷರಾದ ಗೋವರ್ಧನ ರಾಠೋಡ, ಮುಖಂಡರಾದ ಬಸವರಾಜ ಪವಾರ, ಮಾಣಿಕರಾವ ಪವಾರ, ವೀರಶೆಟ್ಟಿ ರಾಠೋಡ, ಗೋಪಾಲಸಿಂಗ ರಾಠೋಡ, ಕೇಶನರಾವ ರಾಠೋಡ ಸೇರಿದಮತೆ ಇತರರು ಉಪಸ್ಥಿತರಿದ್ದರು.

ಪಕ್ಷಭೇದ ಮರೆತು ಸಮಾಜಕ್ಕಾಗಿ ಒಂದಾಗಿ : ಶಾಸಕ ಡಾ.ಅವಿನಾಶ್ ಜಾಧವ



ಕಲಬುರಗಿ, ಫೆ.16-

ಸಮುದಾಯದ ವಿವಿಧ ರಾಜಕೀಯ ಮುಖಂಡರು ಪಕ್ಷಭೇದ ಮರೆತು ಒಂದಾಗಿ ಕೆಲಸ ಮಾಡಿದಾಗ ಮಾತ್ರ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಚಿಂಚೋಳಿ ಶಾಸಕ ಅವಿನಾಶ್ ಜಾಧವ್ ತಿಳಿಸಿದರು.

ನಗರದ ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ರವಿವಾರ ಹಮ್ಮಿಕೊಂಡಿದ್ದ ಸಂತ ಶ್ರೀ ಸೇವಾಲಾಲ್ ಮಹಾರಾಜರ 287ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಂಜಾರ ಸಮಾಜಕ್ಕೆ ಯಾವುದೇ ತಾರತಮ್ಯವಿಲ್ಲದೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ಕೊಡುಗೆ ನೀಡಿದ್ದಾರೆ. ಮಾಜಿ ಸಚಿವ ರೇವುನಾಯಕ ಬೆಳಮಗಿ ಅವರು ಬಂಜಾರಾ ಭವನ ನಿರ್ಮಾಣಕ್ಕೆ ಮೊದಲು ಅನುದಾನ ಒದಗಿಸಿದವರು ಎಂದು ಹೇಳಿದರು.

ಇತ್ತೀಚೆಗೆ ಬಂಜಾರ ಸಮುದಾಯದಲ್ಲಿ ರಾಜಕಾರಣವೇ ಮೊದಲಾಗಿ, ಸಮಾಜದ ಹಿತಾಸಕ್ತಿ ನಂತರವಾಗುತ್ತಿರುವುದು ಗಮನಾರ್ಹವಾಗಿದೆ. ಇಂತಹ ಪರಿಸ್ಥಿತಿಗಳು ಉಂಟಾಗಬಾರದು. ಎಲ್ಲ ಮುಖಂಡರೂ ಸಮಾಜಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಅವರು ಮನವಿ ಮಾಡಿದರು.

ಜಯಂತ್ಯುತ್ಸವ ಸಮಿತಿಯ ಗೌರವಾಧ್ಯಕ್ಷ ರೇವುನಾಯಕ್ ಬೆಳಮಗಿ ಮಾತನಾಡಿ, ಸಂತ ಸೇವಾಲಾಲ್ ಪವಾಡಪುರುಷರು. ತಾಂಡಾ ಅಭಿವೃದ್ಧಿ ನಿಗಮ ಮತ್ತು ಬಂಜಾರ ಭವನಕ್ಕಾಗಿ ಶ್ರಮಿಸಲಾಗಿದೆ. ತಾಂಡಾ ನಿಗಮದ ಮೂಲಕ ವಿವಿಧ ಸೌಲಭ್ಯಗಳು ಸಿಗುತ್ತಿರುವುದು ಸಂತೋಷಕರ ಎಂದರು.

ಗ್ರಾಮೀಣ ಮತಕ್ಷೇತ್ರದ ಶಾಸಕ ಬಸವರಾಜ್ ಮತ್ತಿಮಡು ಮಾತನಾಡಿ, ಸೇವಾಲಾಲ್ ಮಹಾರಾಜರು ಕಾಯಕ ಮತ್ತು ಪ್ರಕೃತಿಯೊಂದಿಗೆ ಬದುಕುವ ಮಹತ್ವವನ್ನು ಬೋಧಿಸಿದವರು. ಭಕ್ತಿಯಿಂದ ದುಡಿಯುವ ಮಾರ್ಗವನ್ನು ತೋರಿಸಿದ ಮಹಾನ್ ವ್ಯಕ್ತಿ ಎಂದು ಹೇಳಿದರು. ತಾಂಡಗಳ ಅಭಿವೃದ್ದಿಗೆ ಶ್ರಮಿಸಲಾಗುತ್ತಿದೆ. ಬಂಜಾರ ಸಮಾಜದ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಸರಟಗಿಯ ಲತಾ ದೇವಿ, ಓಂಕಾರ ಮಹಾರಾಜ್, ಶಂಕರ ಮಹಾರಾಜ್, ವಿಧಾನ ಪರಿಷತ್ ಸದಸ್ಯ ಬಿ.ಜಿ. ಪಾಟೀಲ್, ಜಯಂತಿ ಉತ್ಸವದ ಅಧ್ಯಕ್ಷ ಸಾಗರ್ ರಾಠೋಡ್, ತಹಸೀಲ್ದಾರ್ ಶಿವಪ್ರಭು ಹಿರೇಮಠ, ಎಸ್ಸಿ-ಎಸ್ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹೇಶ್ ಹುಬಳಿ, ವಿಠ್ಠಲ ಜಾಧವ್, ಶ್ಯಾಮರಾವ್ ಪವಾರ್, ಉಮೇಶ್ ರಾಠೋಡ್, ರಾಕೇಶ್ ಚೌಹಾಣ್, ಮಹಾನಗರ ಪಾಲಿಕೆ ಸದಸ್ಯ ಕೃಷ್ಣ ನಾಯಕ, ಬಾಬು ಜಾಧವ್ ಸೇರಿದಂತೆ ಅನೇಕರು ಭಾಗವಹಿಸಿದರು.

ಗಣಪತಿ ರಾಠೋಡ್ ವಿಶೇಷ ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಸ್ವಾಗತಿಸಿದರು. ಭುವನೇಶ್ವರಿ ಜಾಧವ್ ಮತ್ತು ಸಂಗಡಿಗರಿಂದ ನಾಡಗೀತೆ ಪ್ರಸ್ತುತಪಡಿಸಲಾಯಿತು. ತನುಪ್ರಿಯ ರಾಠೋಡ್ ನೃತ್ಯ ಪ್ರದರ್ಶನ ನೀಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗಂಜ್ ಪ್ರದೇಶದ ನಗರೇಶ್ವರ ಶಾಲೆಯಿಂದ ಎಸ್.ಎಂ. ಪಂಡಿತ್ ರಂಗಮಂದಿರದವರೆಗೆ ಸಂತ ಸೇವಾಲಾಲ್ ಮಹಾರಾಜರ ಭಾವಚಿತ್ರದ ಮೆರವಣಿಗೆ ನಡೆಸಲಾಗಿದ್ದು, ಬಂಜಾರಾ ಸಂಸ್ಕೃತಿಯ ನೃತ್ಯಗಳು ವಿಶೇಷ ಆಕರ್ಷಣೆಯಾದವು.

ಸೇವಾಲಾಲ್ ಮಹಾರಾಜರ ಜೀವನ ಎಲ್ಲರಿಗೂ ಪ್ರೇರಣೆ- ಶಾಸಕ ಪ್ರಭು ಚವ್ಹಾಣ



ಔರಾದ್, ಫೆ.16-

ಸಂತ ಸೇವಾಲಾಲ್ ಮಹಾರಾಜರ 287 ನೇ ಜಯಂತಿಯ ನಿಮಿತ್ತ ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಫೆ.15 ರಂದು ಘಮಸು ಬಾಯಿ ತಾಂಡಾ ಬೋಂತಿಯ ಗೃಹ ಕಛೇರಿಯಲ್ಲಿ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು.

ನಂತರ ಮಾತನಾಡಿದ ಶಾಸಕರು, ಸಂತ ಸೇವಾಲಾಲ್ ಮಹಾರಾಜರು ದೇಶ ಕಂಡ ಬಹುದೊಡ್ಡ ಸಂತ, ಮಹಾ ತಪಸ್ವಿ, ಬಂಜಾರಾ ಸಮುದಾಯದ ಧರ್ಮಗುರು, ಸಮಾಜ ಸುಧಾರಕರು. ವಿಶೇಷವಾಗಿ ಬಂಜಾರಾ ಸಮಾಜದ ಉನ್ನತಿಗೆ ಹುಟ್ಟಿ ಬಂದ ಅವತಾರ ಪುರುಷರು. ಹಿಂದೆ ಬಂಜಾರಾ ಸಮಾಜವು ಅನಕ್ಷರತೆ, ಅಂಧಶ್ರದ್ಧೆ ಮತ್ತು ಬಡತನದಂತಹ ನಾನಾ ಸಮಸ್ಯೆಗಳಿಂದ ಬಳಲಿತ್ತು. ಸಾಮಾಜಿಕವಾಗಿ, ಆರ್ಥಿಕವಾಗಿ ತೀವ್ರ ಹಿಂದುಳಿದಿತ್ತು. ಅಂತಹ ಸಮಯದಲ್ಲಿ ಸಂತ ಸೇವಾಲಾಲ್ ಮಹಾರಾಜರು ಸಮಾಜದಲ್ಲಿ ಜಾಗೃತಿ ಮೂಡಿಸಿ, ಶಿಸ್ತು, ನೈತಿಕತೆ ಮತ್ತು ಸಮಾನತೆಯ ಸಂದೇಶ ಸಾರಿದರು.

ದುರ್ಮಾರ್ಗ, ದುಶ್ಚಟಗಳಿಗೆ ಸಿಲುಕಿದ್ದ ಅನೇಕರ ಜೀವನವನ್ನು ಅವರು ಸತ್ಸಂಗ, ಸನ್ಮಾರ್ಗ ಮತ್ತು ಉತ್ತಮ ಮೌಲ್ಯಗಳ ಮೂಲಕ ಪರಿವರ್ತಿಸಿದ್ದರು.

ಸಮಾಜದಲ್ಲಿ ನೈತಿಕತೆ, ಸತ್ಯನಿಷ್ಠೆ, ಭಕ್ತಿ ಮತ್ತು ಶ್ರಮದ ಮಹತ್ವವನ್ನು ಸಾರಿದ್ದರು. ಅಂಧಶ್ರದ್ಧೆಗಳನ್ನು ದೂರ ಮಾಡಿ, ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿ, ಆತ್ಮಗೌರವದಿಂದ ಬದುಕುವಂತೆ ಕಲಿಸಿಕೊಟ್ಟ ಮಹಾನ್ ಗುರುಗಳು ಎಂದು ಹೇಳಿದರು.

ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಧೈರ್ಯವಾಗಿ ಹೋರಾಡಿ ಬಂಜಾರಾ ಸಮಾಜವನ್ನು ಸಂಘಟಿತಗೊಳಿಸಿದ್ದರು. ಅವರ ತತ್ವ-ಆದರ್ಶಗಳು ಬಂಜಾರಾ ಸಮಾಜದಲ್ಲಿ ಒಗ್ಗಟ್ಟು ಮತ್ತು ಸ್ವಾವಲಂಬನೆಗೆ ದಾರಿದೀಪವಾಗಿದೆ. ಬಂಜಾರಾ ಸಮಾಜದ ಏಳಿಗೆಯಲ್ಲಿ ಸೇವಾಲಾಲ್ ಮಹಾರಾಜರ ಪಾತ್ರ ಅಮೋಘ ಎಂದು ಬಣ್ಣಿಸಿದರು.

ನಾನು ಇಚ್ಛಾಪೂರ್ತಿ ಮಾತಾ ಜಗದಂಬಾ, ಸಂತ ಸೇವಾಲಾಲ್ ಮಹಾರಾಜರ ಭಕ್ತನಾಗಿದ್ದು, ಊರಿನಲ್ಲಿ ಮಾತಾ ಜಗದಂಬಾ, ಸೇವಾಲಾಲ್ ಮಹಾರಾಜರು ಮತ್ತು ಕುಲಗುರು ಡಾ.ರಾಮರಾವ ಮಹಾರಾಜರ ಮಂದಿರಗಳನ್ನು ನಿರ್ಮಿಸಿ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಸಂತ ಸೇವಾಲಾಲ್ ಮಹಾರಾಜರ ಜೀವನ ನಮ್ಮೆಲ್ಲರಿಗೂ ಪ್ರೇರಣೆಯಾಗಬೇಕು.

ಅವರ ತ್ಯಾಗ, ಸೇವಾ ಮನೋಭಾವ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಇನ್ನಷ್ಟು ಉನ್ನತಿ ಸಾಧ್ಯ. ಅವರ ತತ್ವ ಸಿದ್ಧಾಂತಗಳು ಮತ್ತು ಸಂದೇಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಮುಖಂಡರಾದ ಸಚಿನ ರಾಠೋಡ, ಸುಭಾಷ ರಾಠೋಡ, ಬಳವಂತ ಪವಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಂತ ಶ್ರೀ ಸೇವಾಲಾಲ್ ಜಯಂತಿ ಆಚರಣೆ



ಬಳ್ಳಾರಿ, ಫೆ.16-

ಮಹನೀಯರ ಜಯಂತಿಗಳು ಕೇವಲ ಆಚರಣೆಗಳಲ್ಲ. ಅವು ಸಮಾಜದ ಒಗ್ಗಟ್ಟು ಮತ್ತು ಶಕ್ತಿಯನ್ನು ಪ್ರತಿಬಿಂಬಿಸುವ ಸಂಕೇತಗಳಾಗಿವೆ ಎಂದು ಮಹಾನಗರ ಪಾಲಿಕೆ ಮಹಾಪೌರ ಪಿ. ಗಾದೆಪ್ಪ ಹೇಳಿದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಸಂತ ಶ್ರೀ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಹಿರಿಯರು ಮತ್ತು ಮುಖಂಡರು ತೋರಿಸಿದ ಮಾರ್ಗದಲ್ಲಿ ನಡೆಯುವುದು ಅಗತ್ಯ. ಮಹನೀಯರ ಸಂದೇಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ಬಾರಿ ಮಹಾನಗರ ಪಾಲಿಕೆಯ ಅನುದಾನದಲ್ಲಿ ಸುಮಾರು 28 ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಶಾಸಕರು ಹಾಗೂ ಪಾಲಿಕೆ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಇಂತಹ ಸಾಂಸ್ಕೃತಿಕ-ಧಾರ್ಮಿಕ ಕಾರ್ಯಕ್ರಮಗಳ ಯಶಸ್ಸಿಗಾಗಿ ಪಾಲಿಕೆಯ ಬಜೆಟ್‌ನಲ್ಲಿ ವಿಶೇಷ ಅನುದಾನ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ. ಚಿದಾನಂದಪ್ಪ ಮಾತನಾಡಿ, ಸಂತ ಸೇವಾಲಾಲ್ ಮಹಾರಾಜರು ಸತ್ಯ, ಅಹಿಂಸೆ ಮತ್ತು ತ್ಯಾಗದ ಮೂಲಕ ಜನಮಾನಸದಲ್ಲಿ ಗುರುಸ್ಥಾನ ಪಡೆದವರು. ವ್ಯಸನಮುಕ್ತ ಜೀವನದ ಸಂದೇಶ ನೀಡಿದ ಮಹನೀಯರು ಧಾರ್ಮಿಕ ರಾಯಭಾರಿಯಾಗಿ ಖ್ಯಾತರಾಗಿದ್ದರು ಎಂದು ಹೇಳಿದರು.

ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸದಸ್ಯ ಪ್ರೊ. ಎಸ್. ಶಾಂತನಾಯ್ಕ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಲು ಶಿಕ್ಷಣವೇ ಪ್ರಮುಖ ಸಾಧನ. ಯುವಕರು ವಿಜ್ಞಾನ, ತಂತ್ರಜ್ಞಾನ ಹಾಗೂ ಇಂಗ್ಲಿಷ್ ಭಾಷೆಯನ್ನು ಅರಿತು ಜಗತ್ತಿನೊಂದಿಗೆ ಪೈಪೋಟಿ ನಡೆಸಬೇಕು ಎಂದು ಕರೆ ನೀಡಿದರು.

ಗುಜರಾತ್ ಗಡಿಯ ವೀರ ಗುರು ಗೋವಿಂದ ಬಂಜಾರರ ಹೋರಾಟ ಇತಿಹಾಸದಲ್ಲಿ ಸಮರ್ಪಕವಾಗಿ ದಾಖಲಾಗದಿರುವುದು ವಿಷಾದನೀಯ. ನಮ್ಮ ಪೂರ್ವಜರ ಸಾಧನೆಗಳನ್ನು ಮುಂದಿನ ಪೀಳಿಗೆಗೆ ತಿಳಿಸುವುದು ನಮ್ಮ ಕರ್ತವ್ಯ ಎಂದರು. ಕಾರ್ಯಕ್ರಮದಲ್ಲಿ ಡಿ. ಸಂಧ್ಯಾರಾವ್ ತಂಡದಿಂದ ಭಕ್ತಿ ಸಂಗೀತ ಗಾಯನ ನಡೆಯಿತು. ಸಂವಿಧಾನ ಪೀಠಿಕೆಯ ಪ್ರತಿಜ್ಞಾವಿಧಿಯೂ ಜರುಗಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮತದಾರರ ಮ್ಯಾಪಿಂಗ್ ಕಾರ್ಯಕ್ಕೆ ಸಹಕರಿಸಿ

ಬಾಗಲಕೋಟೆ, ಫೆ. 16- ಬಾಗಲಕೋಟೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅಂಗವಾಗಿ ಎಲ್ಲ ಮತದಾರರ ಮ್ಯಾಪಿಂಗ್ ಮತ್ತು ಪೊಜನಿ ಕಾರ್ಯ ಕೈಗೊಂಡ ಹಿನ್ನಲೆಯಲ್ಲಿ ಎಲ್ಲ ಸಾರ್ವಜನಿಕರು ತಮ್ಮ ವ್ಯಾಪ್ತಿಯ ಮತಗಟ್ಟೆ ವ್ಯಾಪ್ತಿಯ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ತಮ್ಮ ಕುಟುಂಬದ ಎಲ್ಲ ಅರ್ಹ ಮತದಾರರ ಮಾಹಿತಿಯನ್ನು ಒದಗಿಸಿ ಮ್ಯಾಪಿಂಗ್ ಮತ್ತು ಪೊಜನಿ ಕಾರ್ಯವನ್ನು ಯಶಸ್ವಿಗೆ ಸಹಕರಿಸುವಂತೆ ತಹಶೀಲ್ದಾರ ವಾಸುದೇವ ಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಒಂದನೇಯ ಪುಟದಿಂದ

ಉತ್ತರ ಕನ್ನಡದಲ್ಲಿ ಫೆ.17 ಮತ್ತು 18 ರಂದು ಉಷ್ಣ ಅಲೆ: ಬಳ್ಳಾರಿ, ಕಲಬುರಗಿಯಲ್ಲೂ ಅದೇ ಸ್ಥಿತಿ; ಜಿಲ್ಲಾಡಳಿತಗಳಿಂದ ಎಚ್ಚರಿಕೆ ರವಾನೆ

ರಿಂದ 17.6 ಡಿಗ್ರಿ ಸೆಲ್ಸಿ ಯಸ್ ನಷ್ಟಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಪರಿಸ್ಥಿತಿ ಏನು?: ಬೆಂಗಳೂರು, ಬಳ್ಳಾರಿ -36, ಚಿತ್ರದುರ್ಗ, ದಾವಣಗೆರೆ, ಹಾಸನ, ಚಿಂತಾಮಣಿ, ಮಂಡ್ಯ, ಮೈಸೂರು ಹಾಗೂ ಶಿವಮೊಗ್ಗದಲ್ಲಿ ಗರಿಷ್ಠ ತಾಪಮಾನವು 32 ರಿಂದ 30 ಡಿಗ್ರಿ ಸೆಲ್ಸಿ ಯಸ್ ನಷ್ಟಿದೆ. ಕನಿಷ್ಠ ತಾಪಮಾನವು 11 ರಿಂದ 18.5 ಡಿಗ್ರಿ ಸೆಲ್ಸಿ ಯಸ್ ನಷ್ಟು ಇರಲಿದೆ ಎಂದು ಇಲಾಖೆ ತಿಳಿಸಿದೆ.

ಹಿರಿಯ ಪತ್ರಕರ್ತ ದಿ. ಸೈಯದ್ ಅಶ್ರಫ್ ಕುಟುಂಬಕ್ಕೆ 1 ಲಕ್ಷ ನೆರವು

ನಿಧನರಾಗಿರುವುದು ದುಃಖದ ಸಂಗತಿ ಎಂದರು. ನಗರದಲ್ಲಿ 200ಕ್ಕೂ ಹೆಚ್ಚು ಪತ್ರಕರ್ತರು ಕಾರ್ಯನಿರ್ವಹಿಸುತ್ತಿದ್ದು, ಅವರಿಗಾಗಿ ತುರ್ತು ನಿಧಿ, ಆರೋಗ್ಯ ವಿಮೆ ಸೇರಿದಂತೆ ವಿವಿಧ ಕಲ್ಯಾಣ ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಷೀರುದ್ದಿನ್, ಮಹಮ್ಮದ್ ಶಾಲಂ, ಅಸ್ಲಂ ಪಾಷಾ, ರಜಾಕ್ ಉಸ್ತಾದ್, ರುದ್ರಪ್ಪ ಅಂಗಡಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಜಿಲ್ಲಾಧ್ಯಕ್ಷ ಆರ್. ಗುರುನಾಥ ಸೇರಿದಂತೆ ಹಲವು ಪತ್ರಕರ್ತರು ಉಪಸ್ಥಿತರಿದ್ದರು.

ಶಾಸಕಿ ವಿರುದ್ಧ ಜೆಡಿಎಸ್ ಅತೃಪ್ತರ ಆಕ್ರೋಶ: ಭರವಸೆ ಈಡೇರಿಸದಿದ್ದರೆ ಸೋಲಿಸುವ ಎಚ್ಚರಿಕೆ

ಕಾಮಗಾರಿಗಳಲ್ಲಿ ಕಮಿಷನ್ ವ್ಯವಸ್ಥೆ ನಡೆಯುತ್ತಿದೆ. ಕೆಲವು ಕಾಮಗಾರಿಗಳಲ್ಲಿ 47 ಶೇಕಡಾವರೆಗೆ ಕಮಿಷನ್ ಕಡಿತವಾಗುತ್ತಿದೆ. ಉಳಿದ ಹಣದಲ್ಲಿ ಕೆಲಸ ಮಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಹಲವಾರು ಕಾಮಗಾರಿಗಳಿಗೆ ಪಾವತಿಗಳೂ ಆಗಿಲ್ಲ ಎಂದು ದೂರಿದರು.

ಹೈದರಾಬಾದ್ ಕರ್ನಾಟಕ ಭಾಗದ ಹಿಂದುಳಿದ ತಾಲೂಕುಗಳಿಗೆ ವರ್ಷಕ್ಕೆ 100ರಿಂದ 150 ಕೋಟಿ ರೂ. ಅನುದಾನ ಬರುತ್ತಿದ್ದರೂ, ಅದರ ಸಮರ್ಪಕ ಬಳಕೆ ಆಗುತ್ತಿಲ್ಲ. ಅಭಿವೃದ್ಧಿ ನೆಲಮಟ್ಟದಲ್ಲಿ ಕಾಣಿಸುತ್ತಿಲ್ಲ ಎಂದು ಟೀಕಿಸಿದರು.

ಸಭೆಯಲ್ಲಿ ಸಿದ್ದನಗೌಡ ಮೂಡಲಗುಂಡ, ಭೀಮಣ್ಣ ಗುಮೆದಾರ್, ಶಿವರಾಜ್ ಕೊತ್ತದೊಡ್ಡಿ, ರಂಗಣ್ಣ ಕೋಲ್ಕಾರ್, ಚೆನ್ನಪ್ಪ ಗೆಜ್ಜೆಬಾವಿ, ಶ್ರೀನಿವಾಸ ತಿಮ್ಮಾಪುರ, ದಾವೂದ್ ಆವುಂಟಿ, ಮಲ್ಲು ಕೊತ್ತದೊಡ್ಡಿ, ಶಿವರಾಜ್ ಮುಂಡರಗಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿಲ್ಲಾಡಳಿತದಿಂದ ಶ್ರೀ ಸಂತ ಸೇವಾಲಾಲ್ ಜಯಂತ್ಯುತ್ಸವ ಸಂತ ಸೇವಾಲಾಲರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಡಾ.ಹಂಪಣ್ಣ ಸಜ್ಜನ್ ಸಲಹೆ

ಮೂಲಕ ಆಧ್ಯಾತ್ಮವನ್ನು ಅಪ್ಪಿ ಕೊಂಡು, ದೇವರನ್ನು ಒಲಿಸಿ ಕೊಂಡು, ತಮ್ಮ ಜನಾಂಗದ ಸೇವೆಯನ್ನು ಮಾಡಿದ ಮಹಾನ್ ಹಿತಚಿಂತಕರು. ಸಂತ ಸೇವಾಲಾಲ್ ಅವರು ಕೇವಲ ಒಂದು ಸಮುದಾ ಯಕ್ಕೆ ಸೀಮಿತರಾಗಿಲ್ಲ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸರಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣ ಶಾವಂತಗೇರಾ ಮಾತನಾಡಿ ಸೇವಾಲಾಲರಂತ ಮಹಾನ್ ಪುರುಷರ ಜೀವನ ಚರಿತ್ರೆಯನ್ನು ಇಂದಿನ ಯುವ ಪೀಳಿಗೆಯು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮುದಾಯದ ಜನ ಮಕ್ಕಳನ್ನು ವಿದ್ಯೆಯಿಂದ ವಂಚನೆಮಾಡದೇ ಅವರಿಗೆ ಶಿಕ್ಷಣ ನೀಡುವ ಮೂಲಕ ಅವರನ್ನೆ ಆಸ್ತಿಯನ್ನಾಗಿಸಿಕೊಳ್ಳ ಬೇಕು. ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆದು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಬೆಳಗ್ಗೆ ಸೇವಾಲಾಲ್ ಭಾವಚಿತ್ರದ ಮೆರವಣಿಗೆಯು ಬಸವೇಶ್ವರ ವೃತ್ತದಿಂದ ಅಂಬೇಡ್ಕರ್ ವೃತ್ತದ ಮಾರ್ಗವಾಗಿ ರಂಗಮಂ ದಿರಕ್ಕೆ ಬಂದು ತಲುಪಿತು. ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಶಂಕರ ಎಂ. ಪವಾರ್, ತಾಲ್ಲೂಕು ಪಂಚಾಯಿತಿ ಇಒ ಚಂದ್ರಶೇಖರ ಪವಾರ್, ದಂಡಪ್ಪ ಬೀರಾದಾರ, ಸಮಾಜದ ಮುಖಂಡರು, ಮಹಿಳೆಯರು ಇದ್ದರು.

ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಾಗಾರ

ಕೊಡುಗೆಯಾಗಿದೆ. ಇದರ ಜೊತೆಗೆ ವ್ಯಕ್ತಿಗೆ ಸಿಗಬೇಕಾದ ಸೌಲಭ್ಯ, ಮಾಹಿತಿ, ಸೇವೆಗಳನ್ನು ನೀಡಲು ನಿಯಮಿತ ಜವಾಬ್ದಾರಿ ಇರುತ್ತದೆ. ಇದನ್ನು ಒದಗಿಸಲು ಹಲವಾರು ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಆದರೂ ಸಹ ಕೆಲವರಿಗೆ ಕಾನೂನು ಅರಿವಿನ ಕೊರತೆಯಿಂದ ಸೌಲಭ್ಯ, ಸೇವೆ ಪಡೆಯಲು ಆಗುತ್ತಿಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಸಾಮಾನ್ಯ ಕಾನೂನಿನ ಜ್ಞಾನವನ್ನು ಒದಗಿಸಿ ಆತನನ್ನು ತೊಂದರೆಗಳಿದ ಪಾರು ಮಾಡುವ ಗುರುತರ ಜವಾಬ್ದಾರಿಯನ್ನು ಸ್ವಯಂ ಸೇವಕರು ತೆಗೆದುಕೊಳ್ಳಬೇಕು. ಸಮಾಜ ಸೇವೆ ಮಾಡುವ ಮನಸ್ಥಿತಿಯುಳ್ಳವರು ಮುಂದೆ ಬಂದಿರುವುದು ಶ್ಲಾಘನೀಯವಾಗಿದೆ ಎಂದರು.

ಇದಕ್ಕೂ ಮೊದಲು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಗೌರವಾನ್ವಿತ ನ್ಯಾ.ಹೆಚ್.ಎ.ಸಾತ್ವಿಕ್ ಅವರು ಮಾತನಾಡಿ, ಸಾರ್ವಜನಿಕರಿಗೆ ಕಾನೂನುಗಳ ಸಲಹೆಗಳನ್ನು ಉಚಿತವಾಗಿ ನೀಡುವುದು ಈ ತರಬೇತಿಯ ಉದ್ದೇಶವಾಗಿದೆ. ಕೆಲವೊಂದು ಸಂದರ್ಭದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಸಹ ತೆಗೆದುಕೊಳ್ಳಲು ಸಾರ್ವಜನಿಕರಿಗೆ ಮಾಹಿತಿ ಗೊತ್ತಿರುವುದಿಲ್ಲ. ಅಂತವರಿಗೆ ಸರಿಯಾದ ಮಾಹಿತಿ ಸಲಹೆಗಳನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ನೀಡಿ, ಸರ್ಕಾರದ ವಿವಿಧ ಸೌಲಭ್ಯವನ್ನು ಒದಗಿಸಬೇಕೆಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಬೇಕಾಗುವ ಅಗತ್ಯ ನೆರವುವನ್ನು ಆರೋಗ್ಯ ಇಲಾಖೆಯಿಂದ ನೀಡುವುದರ ಜೊತೆಗೆ ಪ್ರಾಥಮಿಕ ಆರೋಗ್ಯ ದಿಂದ ಜಿಲ್ಲಾ ಮಟ್ಟದ ವೈದ್ಯರಿಗೆ ಕಾನೂನು ಅರಿವು ನೀಡಲು ಶ್ರಮಿಸಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀಕಾಂತ್ ಎಸ್.ವಿ., ಬೆಂಗಳೂರಿನ ಔಟ್ ಲಾಡ್ ಇಂಡಿಯಾ ಸಂಸ್ಥೆಯ ವೆಂಕಟೇಶ ಎಚ್., ಜೋಮಿ ಜಾಯ್ ಸೇರಿದಂತೆ ಇತರರು ಇದ್ದರು. ವಕೀಲರಾದ ಮಾಲತಿ ಅವರು ನಿರೂಪಣೆ, ಸ್ವಾಗವನ್ನು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪನವರು, ವಂದನಾರ್ಪಣೆಯನ್ನು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ನಿರ್ವಹಣೆ ಮಾಡಿದರು.

ಅದ್ದೂರಿಯಾಗಿ ಸಂತ ಸೇವಾಲಾಲರ 287 ನೇ ಜಯಂತಿ ಆಚರಣೆ

ಕೆ.ಪಿ.ಬಿ.ಎಸ್.ಎಸ್ ಜಿಲ್ಲಾಧ್ಯಕ್ಷ ಅಮರೇಶ ನಾಯಕ ಅಂತರಗಂಗಿ, ಗೌರವಧ್ಯಕ್ಷ ಶೇಖರಪ್ಪ ರಾಠೋಡ್, ತಾಲೂಕ ಅದ್ಯಕ್ಷ ಪರಮೇಶ ನಾಯ್ಕ್, ಮೌನೇಶ ಪಾಟೀಲ, ಶರಣಪ್ಪಗೌಡ ಮದ್ಲಾಪೂರ, ದಾನಪ್ಪ, ರಂಜೀತ್, ರಾಮು, ಶಿವರಾಜ ಚಾಗಭಾವಿ,ರಾಮಾಚಾರಿ, ಸಮಾಜದ ಮುಖಂಡರಾದ ಭೀಮೇಶಪ್ಪ ಪೂಜಾರಿ, ಈಕಪ್ಪ ನಾಯ್ಕ, ಗೋವಿಂದ, ಪಾಂಡುರಂಗ ನಾಯ್ಕ, ಜಯರಾಮ ನಾಯ್ಕ,ಶಾಮೆಲಪ್ಪ ನಾಯ್ಕ,ಗೊನ್ನಪ್ಪ, ಜಗನಪ್ಪ, ಮೀಟಪ್ಪ, ಕೇಶಪ್ಪ,ಕೋನಪ್ಪ, ನಿವೃತ್ತ ಎಎಸ್‌ಐ ಚನ್ನಪ್ಪ, ಮಂಜುಳಾ, ಶ್ರೀನಿವಾಸ ನಾಯ್ಕ, ರಾಮು ನಾಯ್ಕ, ರಾಜು ರಾಠೋಡ್, ಶಾಂತಪ್ಪ ಪವಾರ್, ದೇವೇಂದ್ರ ನಾಯ್ಕ ಸೇರಿದಂತೆ ನೂರಾರು

ತಹಸೀಲ್ದಾರ ಕಛೇರಿಯಿಂದ ಸಂತ ಸೇವಾಲಾಲ್ ಭಾವಚಿತ್ರ ಮೆರವಣಿಗೆ

ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡಿ ನಂತರ ಮಾತನಾಡಿದ ಅವರು ಸಂತ ಸೇವಾಲಾಲ್‌ರು ಬಂಜಾರ ಸಮಾಜದ ಪವಾಡ ಪುರುಷ. ಸಮಾಜದಲ್ಲಿನ ಮೌಢ್ಯತೆ ತೊಡೆದು ಹಾಕಿದ ಸಂತರು ಎಂದರು. ನಂತರ ಪಿಡಬ್ಲ್ಯೂಡಿ ಕ್ಯಾಂಪಿನಿಂದ ಸಂತಸೇವಾಲಾಲರ ಭಾವಚಿತ್ರ ಮೆರವಣಿಗೆಯನ್ನು

ನವಲಕಲ್ ಅಭಿನವ ಸೋಮನಾಥ ಶಿವಾಚಾರ್ಯರ, ವಿಠಲಮಹಾರಾಜರು ಬಂಜಾರ ಶಕ್ತಿ ಪೀಠ ತಲಬಂಡಿ ವಜ್ಜಲ್ ತಾಂಡ ಇವರ ನೇತೃತ್ವ ಸಾರೋಟದಲ್ಲಿ ಸಂತ ಸೇವಾಲಾಲರ ಭಾವಚಿತ್ರ ಮೆರವಣಿಗೆಯು

ಪ್ರಾರಂಭವಾಗಿ ಮುಖ್ಯರಸ್ತೆಯ ಮಾರ್ಗವಾಗಿ ದೇವದುರ್ಗ ರಸ್ತೆಯಲ್ಲಿರುವ ಸಜ್ಜಜ ಶ್ರೀ ಶಾಖಾ ಮಠದ ವರೆಗೆ ಸಾಗಿತು.ಮೆರವಣಿಗೆಯಲಿ ಮಹಿಳೆಯರು ಕುಂಬ ಕಳಸದೊಂದಿಗೆ ಸಾಗಿದರೆ, ಯುವಕ, ಯವತಿಯರು ನೃತ್ಯ ಮಾಡುತ್ತಾ ಸಾಗಿದರು.

ಹಿರಿಯ ಮುಖಂಡರಾದ ಚುಕ್ಕಿ ಸೂಗಪ್ಪ ಸಾಹುಕಾರ, ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ, ಉಪಾದ್ಯಕ್ಷೆ ಲಕ್ಷ್ಮೀ ಆದೇಪ್ಪ, ಸದಸ್ಯ ಕೃಷ್ಣನಾಯಕ, ಅಜೀತ್ ಹೊನ್ನಟಗಿ, ಕೆಪಿಬಿಎಸ್ ಎಸ್ ಜಿಲ್ಲಾದ್ಯಕ್ಷ ಅಮರೇಶ, ಗೌರವ ಅದ್ಯಕ್ಷ ಶೇಖರಪ್ಪ ರಾಠೋಡ್, ತಾಲೂಕ ಅದ್ಯಕ್ಷ ಪರಮೇಶ ನಾಯ್ಕ್, ಶೇಖರ, ಡಿ.ಯಮನೂರು, ಸೇರಿದಂತೆ ಇನ್ನಿತರರು ಇದರು.

ಬಿಜೆಪಿ ಕಚೇರಿಯಲ್ಲಿ ಶ್ರೀ ಸಂತ ಸೇವಾಲಾಲ ಜಯಂತಿ ಆಚರಣೆ

ಸ್ವಾಭಿಮಾನ ಕಲಿಸಿದ ಸಂತ ಸೇವಾಲಾಲ : ಡಾ.ವೀರಣ್ಣ ಚರಂತಿಮಠ



ಬಾಗಲಕೋಟೆ, ಫೆ.16-

ಶಿಕ್ಷಣದ ಮಹತ್ವವನ್ನು ಸಾರುವ ಮೂಲಕ ಎಲ್ಲರೂ ಶಿಕ್ಷಿತರಾಗಿ ಅಕ್ಷರ ಜ್ಞಾನವನ್ನು ಪಡೆದು ಜಗತ್ತಿಗೆ ದಾರಿ ದೀಪವಾಗಿ ಎಂದು ತಮ್ಮ ತತ್ವಗಳ ಜ್ಞಾನದ ಮೂಲಕ ಸಾರುತ್ತಾ ಸಮುದಾಯದಲ್ಲಿ ಸ್ವಾಬೀಮಾನ ಕಲಿಸಿದ ಸಂತ ಸೇವಾಲಾಲ ಅವರಾಗಿದ್ದರು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಶಿವಾನಂದ ಜೀನನಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ವತಿಯಿಂದ ಭಾನುವಾರ ಹಮ್ಮಿಕೊಂಡ ಸಂತ ಸೇವಾಲಾಲ ಜಯಂತ್ಯೋತ್ಸವ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನಗಳನ್ನು ಸಲ್ಲಿಸಿ ಮಾತನಾಡಿದ ಅವರು ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸಂತ ಸೇವಾಲಾಲ್ ಮಹಾರಾಜರು ಹಲವು ಪವಾಡಗಳ ಮೂಲಕ ಜನರ ಮನ ಗೆದ್ದವರು. ತಮ್ಮ ಲೀಲೆಗಳನ್ನು ಪ್ರದರ್ಶನ ಮಾಡುತ್ತಾ, ಜನದಂಬೆಯ ಆರಾಧಕರಾಗಿ ಇಡೀ ಜೀವಮಾನದುದ್ದಕ್ಕೂ ಬ್ರಹ್ಮಚರ್ಯವನ್ನೇ ಪಾಲನೆ ಮಾಡಿದ ಸಂತ ಸೇವಾಲಾಲರು, ಇಂದಿಗೂ ಜನ ಮಾನಸದಲ್ಲಿ ಗುರುವಿನ ಸ್ಥಾನವನ್ನು ಪಡೆದಿದ್ದಾರೆ. ಜನತೆಗೆ ವ್ಯಸನ ಮುಕ್ತರಾಗಿ ಎಂದು ಬೋಧಿಸಿದ ಸೇವಾಲಾಲರು ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿಮಾತು ಹೇಳಿದ್ದರು. ಅಷ್ಟೇ ಅಲ್ಲದೆ ಶಿಕ್ಷಣದ ಮಹತ್ವವನ್ನು ಸಾರುವ ಮೂಲಕ ಎಲ್ಲರೂ ಶಿಕ್ಷಿತರಾಗಿ ಅಕ್ಷರ ಜ್ಞಾನವನ್ನು ಪಡೆದು ಜಗತ್ತಿಗೆ ದಾರಿ ದೀಪವಾಗಿ ಎಂದು ತಮ್ಮ ತತ್ವಗಳ ಮೂಲಕ ಲೋಕಕ್ಕೆ ಜ್ಞಾನದ ಮುಕ್ತಿ ಮಾರ್ಗ ತೋರಿಸಿದವರು,ಸರ್ವರನ್ನು ಒಳಗೊಂಡ ಸಮ ಸಮಾಜದ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವನೆಯನ್ನು ಮೂಡಲು ಪ್ರೇರೇಪಿಸಿದರು ಎಂದರು.

ಡಾ. ಎಂ.ಎಸ್. ದಡ್ಡೆನ್ನವರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಬಸವರಾಜ ಯಂಕಂಚಿ, ಶಿವಾನಂದ ಟವಳಿ, ಸತ್ಯನಾರಾಯಣ ಹೆಮಾದ್ರಿ, ಗುಂಡುರಾವ ಶಿಂದೆ, ಅಂಭಾಜಿ ಜೋಷಿ, ಶಿವಾನಂದ ರಾಠೋಡ, ದೀಲಿಪ್ ರಾಠೋಡ, ಗಂಗಾರಾಮು ಚವ್ಹಾಣ, ಗಣೇಶ ರಾಥೋಡ, ಹನಮಂತ ಚವ್ಹಾಣ, ರಣಧೀರ ರಾಠೋಡ, ಸುರೇಶ ಲಮಾಣಿ, ಸುನೀಲ ಚವ್ಹಾಣ, ಆನಂದ ಕೊಟಗಿ, ಗೀರಿಶ ಭಾಂಡಗೆ, ವೀರಣ್ಣ ಹಳೆಗೌಡರ, ಉಮೇಶ ಹಂಚಿನಾಳ ಸೇರಿದಂತೆ ಅನೇಕರು ಇದ್ದರು.



ಕಂದಾಯ ವಸತಿ ಗೃಹದಲ್ಲಿ ಸ್ವಚ್ಛತಾ ಕಾರ್ಯಕ್ರಮ

ಬಾಗಲಕೋಟೆ:, ಫೆ.16-

ನವನಗರದಲ್ಲಿರುವ ಕಂದಾಯ ವಸತಿ ಗೃಹಗಳ ಆವರಣದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರ ನೇತೃತ್ವ ಹಾಗೂ ನಗರಸಭೆ ಸಹಯೋಗದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ರವಿವಾರ ನಡೆಯಿತು.

ಸ್ವಚ್ಛತಾ ಕಾರ್ಯದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ವಸತ ಗೃಹದಲ್ಲಿ ವಾಸವಿರುವ ನೌಕರರು, ನಗರಸಭೆ ಪೌರಾಯುಕ್ತರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು ವಸತಿ ಗೃಹಗಳಲ್ಲಿ ವಾಸಿಸುವ ಕುಟುಂಬಸ್ಥರಿಗೆ ಮನೆಯ ಒಳಗೆ ಮತ್ತು ಹೊರಗಡೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಕಟ್ಟಿಗೆ ಒಲೆ ಬಳಕೆ ಮಾಡುವದನ್ನು ಕಡ್ಡಾಯವಾಗಿ ನಿಷೇಧಿಸುವಂತೆ ಸೂಚನೆ ನೀಡಿದರು. ತಪ್ಪಿದಲ್ಲಿ ದಂಡ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯ ನಿರೀಕ್ಷಕಿ ಪ್ರೀತಿ ಗವಿಮಠ, ಪರಿಸರ ಅಭಿಯಂತರ ಸತೀಶ ಖಜ್ಜಿಡೋಣಿ ಸೇರಿದಂತೆ ಪೌರಕಾರ್ಮಿಕರು, ವಸತಿ ಗೃಹದ ಎಲ್ಲ ಕುಟುಂಬದ ಸದಸ್ಯರು ಸ್ವಚ್ಛತಾ ಆಂದೋಲನದಲ್ಲಿ ಶ್ರಮದಾನ ಮಾಡಿದರು.

ಮಹಾಶಿವರಾತ್ರಿ ಅಂಗವಾಗಿ ಯಾನಗುಂದಿ ಬೆಟ್ಟದಲ್ಲಿ ಧಾರ್ಮಿಕ ಕಾರ್ಯಕ್ರಮಗಳು



ಸೇಡಂ, ಫೆ.16-

ತಾಲೂಕಿನ ಸುಕ್ಷೇತ್ರ ಯಾನ ಗುಂದಿ ಬೆಟ್ಟದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಲಿಂಗೈಕ್ಯ ಅಹಿಂಸಾ ವೀರ ಧರ್ಮಜ ಮಹಾ ಯೋಗಿನಿ ಮಾತೆ ಮಾಣಿಕೇಶ್ವರಿ ಅಮ್ಮನವರ ಸನ್ನಿಧಿ ಯಲ್ಲಿ ಭಾನುವಾರ ಬೆಳಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ವಿವಿಧ ಧಾಮಿರ್ಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು.

ಅಮ್ಮನವರ ಪಾದುಕಾ ಪೂಜೆ, ಮಹಾರುದ್ರಾಭಿಷೇಕ ಹಾಗೂ ಮಂಗಳಾರತಿ ಕಾರ್ಯಕ್ರಮಗಳು ನೆರವೇರಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ, ಶಾಸಕ ಅಲ್ಲಮಪ್ರಭು ಪಾಟೀಲ, ಟ್ರಸ್ಟ್ ಅಧ್ಯಕ್ಷ ಶಿವಯ್ಯಸ್ವಾಮಿ, ಸಕ್ಕರೆ ಆಯುಕ್ತ ಗೋವಿಂದರೆಡ್ಡಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಸಿದ್ರಾಮಪ್ಪ ಸಣ್ಣೂರ, ಭೀಮಣ್ಣ ಸಾಲಿ, ಶಿವಕುಮಾರ (ಜಿಕೆ) ಪಾಟೀಲ ತೆಲ್ಕೂರ, ಜಯ ಪ್ರಕಾಶ ಕಮಕನೂರ, ಚನ್ನಮಲ್ಲಪ್ಪ ಗಂಟಿ (ಗುರಮಿತಕಲ್), ಭೀಮರಾವ್ ವಕೀಲ, ಮೌಲಾಲಿ ಅನಪೂರ, ಪರ್ವತರೆಡ್ಡಿ ಪಾಟೀಲ, ಲಲಿತಾ ಅನಪೂರ, ರವೀಂದ್ರ ನಂದಿಗಾಮ, ಕಿಷ್ಟಪ್ಪ ಮಾಸ್ತರ್, ಗುಂಡಪ್ಪ ಇಟಕಲ್, ತಿಮ್ಮಪ್ಪ ನಿಂಗಾವೋಳ್, ಪರುಶರಾಮರೆಡ್ಡಿ ಗಂಗಾ (ರಾವಲಪಲ್ಲಿ), ಶಿವಕುಮಾರ ಕಾನಾಗಡ್ಡಾ, ರಮೇಶ ಅಸ್ಟೂರ, ನರಸಿಂಹರೆಡ್ಡಿ (ಹೈದರಾಬಾದ್), ಸೂರ್ಯಕಾಂತ ಅವರಾದಿ, ಅಮೀನಾಬೇಗಂ, ರುದ್ರು ಪಿಲ್ಲಿ, ಮಹಾದೇವಪ್ಪ ಗೋಣಿ ಸೇರಿದಂತೆ ಲಕ್ಷಾಂತರ ಭಕ್ತರು ಆಗಮಿಸಿದ್ದರು.

ಸಂತ ಸೇವಾಲಾಲ್‌ರು ಇಡೀ ಸಮಾಜಕ್ಕೆ ಶಾಂತಿಯ ಸಂದೇಶ ಸಾರಿದರು-ಸಚಿವ ರಹೀಂ ಖಾನ್



ಬೀದರ, ಫೆ.16-

ಸಂತ ಸೇವಾಲಾಲ್ ಮಹಾರಾಜರು ಇಡೀ ಸಮಾಜಕ್ಕೆ ಒಳಿತನ್ನು ಬಯಸಿ ಶಾಂತಿಯ ಸಂದೇಶ ಸಾರಿದವರು. ಅವರು ಮಾನವ ಕುಲಕ್ಕೆ ಸುಧಾರಣೆಗೆ ಪ್ರಯತ್ನಿಸಿದವರು ಎಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಹೇಳಿದರು.

ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಪೂಜ್ಯ ಚನ್ನಬಸವ ಪಟ್ಟ ದೇವರು ರಂಗಮಂದಿರದಲ್ಲಿ ಆಯೋ ಜಿಸಿದ್ದ ಸಂತ ಸೇವಾಲಾಲ್‌ರ 287ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂತ ಸೇವಾಲಾಲರಂತಹ ದಾರ್ಶನಿಕರು ಒಂದು ಜಾತಿಗೆ ಸೀಮಿತರಲ್ಲ. ಅವರು ಬಂಜಾರ ಸಮಾಜ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಬಹಳಷ್ಟು ಉತ್ತಮ ಸಂದೇಶ ನೀಡಿದ್ದಾರೆ. ಇವರ ವಚನ, ಸಂದೇಶಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಶಿಕ್ಷಣವಂತರಾದಾಗ ಮಾತ್ರ ಸಮಾಜ ಏಳ್ಗೆ ಹೊಂದಲು ಸಾಧ್ಯ. ಆದ್ದರಿಂದ ಸಮಾಜದ ಜನತೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೀದರನ ಮರ್ಕಲ್ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಬಳವಂತರಾವ್ ರಾಥೋಡ್ ಅವರು ಸಂತ ಸೇವಾಲಾಲ್ ಮಹಾರಾಜರ ಕುರಿತು ಅತಿಥಿ ಉಪನ್ಯಾಸನವನ್ನು ನೀಡಿದರು.

ಕಾರ್ಯಕ್ರಮಕ್ಕೂ ಮುಂಚಿತವಾಗಿ ಸಂತ ಸೇವಲಾಲ ಮಹಾರಾಜರ ಭಾವಚಿತ್ರ ಮೆರವಣಿಗೆಯು ನಗರದ ಶಿವಾಜಿ ವೃತ್ತ, ಭಗತಸಿಂಗ್ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ,

ಜನರಲ್ ಕರಿಯಪ್ಪ ವೃತ್ತದಿಂದ ಮೂಲಕ ಹಾದು ರಂಗಮಂದಿರದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಜಿಲ್ಲಾ ಬಂಜಾರಾ ಸಮಾಜದ ಅಧ್ಯಕ್ಷರಾದ ಗೋವರ್ಧನ ರಾಠೋಡ, ಮುಖಂಡರಾದ ಬಸವರಾಜ ಪವಾರ, ಮಾಣಿಕರಾವ ಪವಾರ, ವೀರಶೆಟ್ಟಿ ರಾಠೋಡ, ಗೋಪಾಲಸಿಂಗ ರಾಠೋಡ, ಕೀಶನರಾವ ರಾಠೋಡ ಸೇರಿದಮತೆ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಮೂಲಕ ಉನ್ನತ ಸಾಧನೆ ಮಾಡಬೇಕು : ಮಹಾನಂದಾ ಧಬಾಲೆ



ಬಸವಕಲ್ಯಾಣ, ಫೆ.16-

ನಗರದ ಹೊರವಲಯದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಶನಿವಾರ ನಡೆದ ಎಸೆಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರಾಚಾರ್ಯೆ ಮಹಾನಂದಾ ಧಬಾಲೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ಶ್ರಮವಿಟ್ಟು ಅಭ್ಯಾಸ ಮಾಡುವ ಮೂಲಕ ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಗ್ರಾಮೀಣ ಭಾಗದ ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರ ವಸತಿ ಶಾಲೆಗಳನ್ನು ಸ್ಥಾಪಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದೆ. ವಿದ್ಯಾರ್ಥಿಗಳು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಿಂದ ಭರತನಾಟ್ಯ, ಜಾನಪದ ಗಾಯನ, ಭಾಷಣ, ನೃತ್ಯ ರೂಪಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ತಾಲೂಕು ಹಾಗೂ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಕಳೆದ ಸಾಲಿನ ಎಸೆಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪತ್ರಕರ್ತ ಉದಯಕುಮಾರ್ ಮುಳೆ, ನಿಲಯ ಪಾಲಕಿ ಅರ್ಚನಾ ಚಂದುಕರ್, ಶಿಕ್ಷಕಿಯರಾದ ಮಾಯಾದೇವಿ ಪಾಟೀಲ್, ರೋಹಿಣಿ, ಅನಿತಾ ರಾಠೋಡ್, ಸುಧಾರಾಣಿ, ನಿತೀನ್ ನೀಲಕಂಠೆ, ಸಾಧಕ್ ಅಲಿ, ಸಿದ್ದಲಿಂಗ್ ಬೇಲೂರೆ, ಸಿಬ್ಬಂದಿಗಳಾದ ಶಿವಕುಮಾರ್ ಸ್ವಾಮಿ, ಚಿದಾನಂದ್ ಸ್ವಾಮಿ, ರಾಜಕುಮಾರ್ ಮಠಪತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಾಲೆಯ ವ್ಯವಸ್ಥಾಪಕ ರಾಘವೇಂದ್ರ ಹಣಕುಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಜಗನ್ನಾಥಯ್ಯ ಸ್ವಾಮಿ ಸ್ವಾಗತಿಸಿದರು. ಪ್ರತಿಮಾ ಪಾಟೀಲ್ ಕಾರ್ಯಕ್ರಮ ನಿರೂಪಿಸಿದರು. ಪುಂಡಲಿಕ್ ಮಾನೆ ವಂದಿಸಿದರು.

ಎತ್ತು, ಭೂಮಿ ತಾಯಿ ರೈತನ ಬಾಳನ್ನು ಬೆಳಗುವ ಜೀವನಾಡಿ

ಕನಕಗಿರಿ, ಫೆ.16-

ಎತ್ತು ಹಾಗೂ ಭೂಮಿತಾಯಿ ರೈತನ ಬಾಳನ್ನು ಬೆಳಗುವ ಜೀವನಾಡಿ. ಈ ಎರಡನ್ನು ಸ್ವಚ್ಛ ಮನಸ್ಸಿನಿಂದ ಪೂಜಿಸುವವರ ಜೀವನ ಬಂಗಾರವಾಗುತ್ತದೆ ಎಂದು ಸುವರ್ಣಗಿರಿ ಸಂಸ್ಥಾನ ವಿರಕ್ತಮಠದ ಚನ್ನಮಲ್ಲಸ್ವಾಮಿ ತಿಳಿಸಿದರು.

ಪಟ್ಟಣದ ಬಸರಿಹಾಳ ರಸ್ತೆಯಲ್ಲಿ ಶ್ರೀ ಕನಕದುರ್ಗ ಎತ್ತುಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಭಾನುವಾರ ಆಯೋಜಿದ್ದ 'ಕುಂಟಿ ದಿಂಡಿನ ಮೇಲೆ ಉಸುಕಿನ ಚೀಲದ ದಿಂಡು ಎಳೆಯುವ ಸ್ಪರ್ಧೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನೋಲ್ಲಾಸ ನೀಡುವ ಕ್ರೀಡೆಗಳನ್ನು ಬಿಟ್ಟು ಜನ ಮೊಬೈಲ್‌ಗೆ ಜೋತು ಬಿದ್ದಿದ್ದಾರೆ ದೇಶಿಯ ಕ್ರೀಡೆಗಳಾದ ಕುಸ್ತಿ, ಕಬ್ಬಡ್ಡಿ, ಮುಂಗೈ ಇತರೆ ಆಟೋಟದಲ್ಲಿ ಭಾಗಿಯಾದರೆ ಉತ್ತಮ ಆರೋಗ್ಯವನ್ನು ಪಡೆದುಕೊಳ್ಳಲು ಸಾಧ್ಯವಿದೆ ಎಂದು ತಿಳಿಸಿದರು.

ಯುವಕರು ಗ್ರಾಮೀಣ ಭಾಗದ ಕ್ರೀಡೆಗಳಿಗೆ ಹೆಚ್ಚಿನ ಒಲವು ನೀಡಬೇಕು. ಒಣ ರಾಜಕೀಯ ಮಾಡುವವರೆ ಹೆಚ್ಚಾಗಿರುವ ಈ ಸಮಯದಲ್ಲಿ ರೈತರು ಸಿಗುತ್ತಿಲ್ಲ. ಇದ್ದ ರೈತರಿಗೆ ಹೆಣ್ಣು ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಹತ್ತಕ್ಕೂ ಹೆಚ್ಚು ಜೋಡಿ ಎತ್ತುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಅವು ಓಡುತ್ತಿದ್ದಂತೆ ಅಲ್ಲಿ ಸೇರಿದ ಜನರು ಚಪ್ಪಾಳೆ, ಸಿಳ್ಳೆಕೇಕೇ ಹಾಕಿ ಸಂತಸ ವ್ಯಕ್ತಪಡಿಸಿದರು. ಸ್ಪರ್ಧೆಯ ನಿಮಿತ್ತರೈತರು ತಮ್ಮ ಎತ್ತುಗಳನ್ನು ಬಲೂನ್, ಗೆಜ್ಜೆ ಕಟ್ಟಿ ಶೃಂಗಾರಿಸಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ಗಂಗಾಧರಸ್ವಾಮಿ, ವಕ್ತಾರ ಶರಣ ಬಸಪ್ಪ ಭತ್ತದ, ಗಣೇಶರೆಡ್ಡಿ, ಮದರ ಸಾಬ ಸಂತ್ರಾಸ, ಇತರರು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಪುಸ್ತಕಗಳ ಓದು ಹೆಚ್ಚಾಗಲಿ

ಆನ್‌ಲೈನ್/ಡಿಜಿಟಲ್ ಸ್ವರೂಪದ ಶ್ರವಣ ಮತ್ತು ದೃಶ್ಯ ಮಾಧ್ಯಮಗಳ ಬಳಕೆ ಹೆಚ್ಚಾಗುತ್ತಾ ಹೋದಂತೆ ಪುಸ್ತಕಗಳನ್ನು ಓದುವ ಪರಿಪಾಠವು ಕ್ರಮೇಣ ಮೂಲೆಗುಂಪಾಗುತ್ತಿದೆ. ಪುಸ್ತಕಗಳ ಕಥೆ ಹಾಗಿರಲಿ, ದಿನಪತ್ರಿಕೆಗಳನ್ನು ತಿರುವಿಹಾಕುವುದೂ ಬಹುತೇಕರಿಗೆ ದುಸ್ತರವಾಗಿದೆ.



ಎಲ್ಲವೂ ಅಂಗೈನಲ್ಲೇ, ಕೈಬೆರಳಿನ ಕ್ಲಿಕ್‌ನಲ್ಲೇ ಲಭ್ಯವಿರುವುದೇ ಇದಕ್ಕೆ ಕಾರಣ. ಪುಸ್ತಕದಲ್ಲಿ ಅಡಕ ವಾಗಿರುವ ಹೂರಣ, ಡಿಜಿಟಲ್ ಸ್ವರೂಪದಲ್ಲೇ ಲಭ್ಯವಿರುವಾಗ ಅದನ್ನು ನೆಚ್ಚುವುದರಲ್ಲಿ ತಪ್ಪೇ ನಿದೆ? ಮಾಹಿತಿಯನ್ನೋ ಕಥನವನ್ನೋ ವ'ು ನ'ದ'ಾ ಳ'ಕ'ಿ ಇಳಿಸಿಕೊಳ್ಳುವುದು ಮುಖ್ಯವಲ್ಲವೇ? ಎಂದು ಕೆಲವರು ಪ್ರಶ್ನಿಸುವುದುಂಟು. ಇದೂ ಒಪ್ಪುವಂಥ ಮಾತೇ. ಆದರೆ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದು, ಅದರ ಸಾಲುಗಳಿಗೆ ಪ್ರತ್ಯಕ್ಷ ಒಡ್ಡಿಕೊಂಡು, ಅಕ್ಷರದ ರಸಾಸ್ವಾದನೆಯನ್ನು ಮಾಡುವುದಿದೆಯಲ್ಲಾ, ಅದು ಪ್ರಾಯಶಃ ಡಿಜಿಟಲ್ ಸ್ವರೂಪದಲ್ಲಿ ದಕ್ಕುವುದಿಲ್ಲ. ಜತೆಗೆ, ಪುಸ್ತಕದ ಆ ಸಾಲುಗಳಲ್ಲಿರುವ ಭಾವನೆಗೆ ನಮ್ಮ ಮನವನ್ನು ಸರಿಹೊಂದಿಸಿಕೊಳ್ಳುತ್ತಾ ಸ್ವೀಕರಿಸುತ್ತಾ ಹೋದಂತೆ, ನಮಗೇ ಅರಿವಿಲ್ಲದಂತೆ ನಮ್ಮ ಕಲ್ಪನಾಶಕ್ತಿಯೂ ಗಣನೀಯವಾಗಿ ಗಾಢವಾಗುವುದಿದೆ.

ಈ ಪ್ರತ್ಯಕ್ಷ ರಸಘಟ್ಟಿಯು ಪ್ರಾಯಶಃ ಅನ್ಯ ಸ್ವರೂಪದ ಓದಿನಲ್ಲಿ ಅಲಭ್ಯವೆಂದೇ ಹೇಳಬೇಕು. ಕನ್ನಡ ಸಾರಸ್ವತ ಲೋಕವು ಓದುಗರ ಇಂಥ ಮನಃಪೂರ್ವಕ ತೊಡಗಿಸಿಕೊಳ್ಳುವಿಕೆಯಿಂದಲೇ ಪ್ರಸಿದ್ಧಿಯ ಪರಾಕಾಷ್ಠೆಗೆ ಏರಿದ ದಿನಗಳೂ ಇದ್ದವು. ಕುವೆಂಪು, ಬೇಂದ್ರೆ, ಕಾರಂತರು ಅಥವಾ ಅಡಿಗರ ಸಾಹಿತ್ಯ ಸೃಷ್ಟಿಗಳಿಗೆ ಮಾತ್ರವೇ ಇದು ಅನ್ವಯವಲ್ಲ; ಕಳೆದ ಕೆಲ ದಶಕಗಳಲ್ಲಿ ಯಂಡಮೂರಿ ವೀರೇಂದ್ರನಾಥರ ತುಳಸೀದಳ, ತುಳಸಿ, ಕಪ್ಪಂಚು ಬಿಳಿಸೀರೆ, ದುಡ್ಡು ದುಡ್ಡು ದುಡ್ಡು ಮುಂತಾದ ಕೃತಿಗಳ ಓದುಗರಿಗೂ ಇಂಥ ರಸಘಟ್ಟಿಯ ಅನುಭೂತಿ ಆಗಿರುತ್ತದೆ.

ಅದು ಅಕ್ಷರದ ತಾಕತ್ತೂ ಹೌದು, ಪುಸ್ತಕದ ಓದುವಿಕೆಗೆ ನೇರವಾಗಿ ಒಡ್ಡಿಕೊಂಡಾಗಿನ ಸುಖವೂ ಹೌದು. ದಿನಕ್ಕೊಂದು ಮೌಲಿಕ ಪುಸ್ತಕವನ್ನು ಓದಲಾಗದಿದ್ದರೂ, ಕನಿಷ್ಠಪಕ್ಷ ತಿಂಗಳಿಗೊಂದು ಪುಸ್ತಕವಾದರೂ ಮನಕ್ಕೆ ಆಹಾರವಾದಲ್ಲಿ, ಅದು ಚಿತ್ತಸ್ವಾಸ್ಥ್ಯವನ್ನೂ ಕಲ್ಪನಾಶಕ್ತಿಯನ್ನೂ ವೃದ್ಧಿಸುವುದರಲ್ಲಿ ಅನುಮಾನವಿಲ್ಲ. ಒಮ್ಮೆ ಯತ್ನಿಸಿ ನೋಡಿ..



ಪಾಕ್ ಬೌಲರ್ ಉಸ್ಮಾನ್ ತಾರಿಕ್‌ಗೆ ಎಂ.ಎಸ್ ಧೋನಿಯ ಜೀವನಗಾಥೆಯೇ ಪ್ರೇರಣೆ!

ಪಾಕಿಸ್ತಾನ ಕ್ರಿಕೆಟ್ ತಂಡದಲ್ಲಿ ಮಿಂಚುತ್ತಿರುವ ಮಿಸ್ಟರಿ ಸ್ಪಿನ್ನರ್ ಉಸ್ಮಾನ್ ತಾರಿಕ್ ಅವರ ಬದುಕಿನ ಕತೆಯು ಸಿನಿಮಾದಷ್ಟೇ ರೋಮಾಂಚಕವಾಗಿದೆ. ದುಬೈನಲ್ಲಿ ಸೇಲ್ಸ್ ಮನ್ ಆಗಿದ್ದ ತಾಕಿಕ್ ಇಂದು ಪಾಕ್ ತಂಡದ ಬಹುಬೇಡಿಕೆಯ ಬೌಲರ್ ಆಗಿದ್ದಾರೆ. ಅವರು ತಮ್ಮ ಕ್ರಿಕೆಟ್ ಜೀವನಕ್ಕೆ ಭಾರತೀಯ ಕ್ರಿಕೆಟ್ ದಿಗ್ಗಜರಲ್ಲಿ ಒಬ್ಬರಾದ ಎಂ.ಎಸ್ ಧೋನಿಯವರ ಬಯೋಪಿಕ್ ಸಿನಿಮಾವೇ ಪ್ರೇರಣೆ ಎಂದು ಹೇಳಿಕೊಂಡಿದ್ದಾರೆ.

30ರ ಹರೆಯದ ತಾರಿಕ್ ಅವರು 1995ರ ಜೂನ್ 7ರಂದು ಪಾಕಿಸ್ತಾನದ ಖೈಬರ್ ಪಖ್ತೂನ್‌ಖ್ವಾ ಪ್ರಾಂತ್ಯದ ನೌಶೆರಾ ಜಿಲ್ಲೆಯಲ್ಲಿ ಜನಿಸಿದವರು. ಅವರ ತಮ್ಮ ಬಾಲ್ಯದ ಕನಸು ಕ್ರಿಕೆಟ್ ಆಗಿತ್ತು. ಆದರೆ, ಆರಂಭಿಕ ಹಂತದಲ್ಲಿ ಅವಕಾಶಗಳು ಸಿಗದೆ, ಕ್ರಿಕೆಟ್ ಬಿಟ್ಟು ಉದ್ಯೋಗ ಹರಸಿ ದುಬೈಗೆ ತೆರಳಿದ್ದರು. ಪರ್ಚೇಸಿಂಗ್ ಕಂಪನಿಯಲ್ಲಿ ಸೇಲ್ಸ್ ಮನ್‌ಆಗಿ ಕೆಲಸ ಮಾಡುತ್ತಿದ್ದರು. ಅಲ್ಲಿನ ಅವರ ಜೀವನವು ದುಡಿಯುವುದು, ಜೀವಿಸುವುದಕ್ಕಷ್ಟೇ ಸೀಮಿತವೂ ಆಗಿತ್ತು. ಕ್ರಿಕೆಟ್ ಕನಸು ಬತ್ತಿಹೋಗಿತ್ತು.

ಆದರೆ, ಅವರ ಕ್ರಿಕೆಟ್ ಕನಸಿಗೆ ಮತ್ತೆ ಜೀವ ತುಂಬಿದ್ದು, 2016ರಲ್ಲಿ ಬಿಡುಗಡೆಯಾದ ಎಂ.ಎಸ್. ಧೋನಿ: ದಿ ಅನ್‌ಟೋಲ್ಡ್ ಸ್ಟೋರಿ ಎಂಬ ಬಾಲಿವುಡ್ ಬಯೋಪಿಕ್ ಸಿನಿಮಾ. ಈ ಸಿನಿಮಾ ಟೀಮ್ ಇಂಡಿಯಾದ ಮಾಜಿ ನಾಯಕ ಎಂ.ಎಸ್ ಧೋನಿ ಅವರು ಟಿಕೆಟ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಾ, ನಿರಾಶೆಯ ಜೀವನವನ್ನು ಎದುರಿಸಿ, ಕೊನೆಗೆ ವಿಶ್ವಕಪ್ ಗೆದ್ದ ನಾಯಕನಾಗಿ ಬೆಳೆದ ಕಥೆಯನ್ನು ವಿವರಿಸುತ್ತದೆ. ಈ ಸಿನಿಮಾ ನೋಡಿದ ತಾರಿಕ್ ಪ್ರಭಾವಿತರಾಗಿ, ಮತ್ತೆ ಕ್ರಿಕೆಟ್ ಕ್ಷೇತ್ರಕ್ಕೆ ಧಾವಿಸಿದರು.

ತಾರಿಕ್ ಅವರೇ ಹೇಳುವಂತೆ; ''ನಾನು ಕ್ರಿಕೆಟ್‌ನಲ್ಲಿ ಹೆಸರು ಮಾಡುವ ಆಲೋಚನೆಯನ್ನು ಬಿಟ್ಟು ದುಬೈಯಲ್ಲಿ ಸೇಲ್ಸ್ ಮನ್ ಆಗಿದ್ದೆ. ಆದರೆ, ಒಂದು ದಿನ ಎಂ.ಎಸ್. ಧೋನಿ ಅವರ ಬಯೋಪಿಕ್ ನೋಡಿದೆ. ಅದು ನನ್ನನ್ನು ತುಂಬಾ ಸ್ಫೂರ್ತಿಗೊಳಿಸಿತು. ಧೋನಿ ಟಿಕೆಟ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಾ, ತಮ್ಮ ಕನಸನ್ನು ಬಿಡದೇ ಹೋರಾಡಿದ್ದನ್ನು ನೋಡಿ, ನನಗೆ ಇನ್ನೂ ಅವಕಾಶವಿದೆ ಎಂಬ ಭಾವನೆ ಬೆಳೆಯಿತು. ಆ ಸಿನಿಮಾ ನನ್ನನ್ನು ಮರಳಿ ಪಾಕಿಸ್ತಾನಕ್ಕೆ ಕರೆತಂದಿತು, ಕ್ರಿಕೆಟ್ ಮುಂದುವರಿಸಲು ಪ್ರೇರೇಪಿಸಿತು.''

ಧೋನಿ ಅವರ ಬಯೋಪಿಕ್‌ನಿಂದ ಸ್ಫೂರ್ತಿ ಪಡೆದ ಉಸ್ಮಾನ್ ತಾರಿಕ್ ಅವರು ದುಬೈನಲ್ಲಿನ ತಮ್ಮ ಕೆಲಸವನ್ನು ತ್ಯಜಿಸಿ, ಪಾಕಿಸ್ತಾನಕ್ಕೆ ಮರಳಿದರು. ಮತ್ತೆ ಕ್ರಿಕೆಟ್ ಅಭ್ಯಾಸ ಆರಂಭಿಸಿದರು. ಅವರ ಬೌಲಿಂಗ್ ಆಕ್ಷನ್ (ಸ್ಲಿಂಗ್ ಆಕ್ಷನ್‌ನೊಂದಿಗೆ ಪಾಜ್ ಮತ್ತು ಸೈಡ್-ಆರ್ಮ್ ರಿಲೀಸ್) ವಿಶೇಷವಾಗಿ ಮಿಸ್ಟರಿ ಸ್ಪಿನ್ ಆಗಿ ಗಮನ ಸೆಳೆಯಿತು. ಕೆಲವು ಆರಂಭಿಕ ಟೂರ್ನಮೆಂಟ್‌ಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ನಂತರ ಅವರು 2025ರಲ್ಲಿ ಕ್ಯಾರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ () 20 ವಿಕೆಟ್‌ಗಳನ್ನು ಪಡೆದು ಎರಡನೇ ಸ್ಥಾನಕ್ಕೇರಿದರು. ಇದರಿಂದ ಅವರು ಪಾಕಿಸ್ತಾನದ ರಾಷ್ಟ್ರೀಯ ತಂಡದ ಗಮನ ಸೆಳೆದರು.

2025-26ರಲ್ಲಿ ಅವರು ಪಾಕಿಸ್ತಾನದ ಏಕದಿನ 20 ತಂಡಕ್ಕೆ ಆಯ್ಕೆಯಾದರು. ಐಸಿಸಿ 20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನದ -ಫ್ಯಾಕ್ಟರ್ ಆಗಿ ಹೊರಹೊಮ್ಮಿದರು. ಆದಾಗ್ಯೂ, ಅವರ ಬೌಲಿಂಗ್ ಆಕ್ಷನ್‌ಗೆ ಸಂಬಂಧಿಸಿದಂತೆ ವಿವಾದಗಳೂ ಮುನ್ನೆಲೆಯಲ್ಲಿವೆ. ಆದರೂ, ಸ್ಟಾರ್ ಬೌಲರ್ ಆಗಿ ಕ್ರಿಕೆಟ್ ಪ್ರೇಮಿಗಳ ಗಮನ ಸೆಳೆದಿದ್ದಾರೆ.

ರಾಯಚೂರು ಅಂಚೆ ಇಲಾಖೆಯಿಂದ ಉಳಿತಾಯ ಸಂಕಲ್ಪ ಅಭಿಯಾನ

ರಾಯಚೂರು ಫೆಬ್ರವರಿ 16

ಅಂಚೆ ಇಲಾಖೆಯಿಂದ ಸಾರ್ವಜನಿಕರಿಗೆ ಉತ್ತಮ ಆದಾಯ ನೀಡುವ ವಿವಿಧ ಉಳಿತಾಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಬಳಸಿಕೊಳ್ಳುವಂತೆ ಜಾಗೃತಿ ಮೂಡಿಸಲು ಹಾಗೂ ಅಂಚೆ ಕಚೇರಿಗಳ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಿಗೆ ಉತ್ತೇಜನ ನೀಡಲು ಉಳಿತಾಯ ಸಂಕಲ್ಪ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರದ ಭರವಸೆಯೊಂದಿಗೆ ಅಂಚೆ ಕಚೇರಿ ಉಳಿತಾಯ ಬ್ಯಾಂಕ್ (ಪಿಒಎಸ್‌ಬಿ) ಸಾರ್ವಜನಿಕರಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಉಳಿತಾಯ ಹಾಗೂ ಹೂಡಿಕೆ ಯೋಜನೆಗಳನ್ನು ಒದಗಿಸುತ್ತಿದೆ. ಅಂಚೆ ಕಚೇರಿಗಳ ವಿವಿಧ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಲ್ಲಿ ಹೂಡಿಕೆ ಮಾಡುವ ಮೂಲಕ ಗ್ರಾಹಕರು ತಮ್ಮ ಹೂಡಿಕೆಯ ಮೇಲೆ ನಿಯಮಿತ ಬಡ್ಡಿ ಹಾಗೂ ನಿರಂತರ ಆದಾಯವನ್ನು ಪಡೆಯಬಹುದು.

ಈ ಯೋಜನೆಗಳು ದೇಶದ ಎಲ್ಲಾ ಅಂಚೆ ಕಚೇರಿಗಳಲ್ಲಿ, ವಿಶೇಷವಾಗಿ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿಯೂ ಲಭ್ಯವಿವೆ. ಇದಲ್ಲದೆ, ಗ್ರಾಹಕರು ಎಟಿಎಂ, ನೆಟ್ ಬ್ಯಾಂಕಿಗ್, ಮೊಬೈಲ್ ಬ್ಯಾಂಕಿಗ್, ನೆಫ್ಟ್ ಹಾಗೂ ಆರ್‌ಟಿಜಿಎಸ್ ಸೇರಿದಂತೆ ಆಧುನಿಕ ಬ್ಯಾಂಕಿಗ್ ಸೌಲಭ್ಯಗಳನ್ನು ಸಹ ಉಪಯೋಗಿಸಬಹುದು.

ಉಳಿತಾಯ ಖಾತೆ ಹೊಂದಿರುವ ಗ್ರಾಹಕರು ಕಡಿಮೆ ಪ್ರೀಮಿಯಂನಲ್ಲಿ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ) ಹಾಗೂ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ(ಪಿಎಂಜೆಜೆಬಿವೈ) ಗಳಲ್ಲಿ ನೋಂದಾಯಿಸಿಕೊಡು ಅನಿರೀಕ್ಷಿತ ಸಂದರ್ಭಗಳಲ್ಲಿ ತಮ್ಮ ಕುಟುಂಬಕ್ಕೆ ಅಗತ್ಯವಾದ ಆರ್ಥಿಕ ಭದ್ರತೆಯನ್ನು ಒದಗಿಸಬಹುದು.ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಇಂಡಿಯಾ ಪೋಸ್ಟ್ ಇದೀಗ ಉಳಿತಾಯ ಸಂಕಲ್ಪ ಅಭಿಯಾನವನ್ನು ಜಾರಿಗೊಳಿಸಿದೆ. ಎಲ್ಲಾ ನಾಗರಿಕರು ತಮ್ಮ ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಹೊಸ ಉಳಿತಾಯ ಖಾತೆ ತೆರೆಯುವಂತೆ ಹಾಗೂ ಅಂಚೆ ಕಚೇರಿಗಳ ವಿವಿಧ ಯೋಜನೆಗಳಲ್ಲಿ ಹೂಡಿಕೆ ಮಾಡಿ ನಿಯಮಿತ ಮತ್ತು ನಿರಂತರ ಆದಾಯ ಪಡೆಯುವಂತೆ ವಿನಂತಿಸಲಾಗಿದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಲು ಸಾರ್ವಜನಿಕರು ಸಹಕರಿಸಬೇಕು ಎಂದು ರಾಯಚೂರು ವಿಭಾಗೀಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋವು-ಸಂಕಟಗಳ ನುಂಗಿ ಮುನ್ನುಗ್ಗುತ್ತಿರುವ ಮಹಿಳಾ ಕ್ರಿಕೆಟ್ ಕಲಿಗಳಿಗೊಂದು ಸಲಾಮ್!



ಕ್ರಿಕೆಟ್ ಎಂದಾಗ ಪುರುಷರ ತಂಡವಾಗಲಿ, ಮಹಿಳೆಯರ ತಂಡವಾಗಲಿ ಮಾನಸಿಕ ಒತ್ತಡ, ದೈಹಿಕ ನೋವು ಇದ್ದೇ ಇರುವಂತದ್ದು. ಆದರೆ ಮಹಿಳೆಯರು ಕ್ರಿಕೆಟ್ ಮೈದಾನದಲ್ಲಿ ಮುಟ್ಟಿನೊಂದಿಗೆ ಮೌನ ಕದನವನ್ನೂ ನಡೆಸುವವರು. ಮಹಿಳಾ ಕ್ರಿಕೆಟಿಗರ ಹಿಂದೆ ನಮಗೆ ತಿಳಿಯದ ದೈಹಿಕ ಯಾತನೆಯ ಕಥೆಗಳಿವೆ.

ಕ್ರಿಕೆಟ್ ಎಂಬುದು ಬರೀ ಪುರುಷರಿಗೆ ಸೀಮಿತ ಎಂಬ ಕಾಲವೊಂದಿತ್ತು. ಆದರೆ ಇಂದು ಕಾಲ ಬದಲಾಗಿದೆ. ಪುರುಷರಿಗೆ ಸಮಾನವಾಗಿ, ಸದೃಢವಾಗಿ ಮಹಿಳೆಯರು ಕ್ರಿಕೆಟ್‌ನಲ್ಲಿ ತೊಡಗಿಕೊಂಡಿದ್ದಾರೆ. ಭಾರತದಲ್ಲಿ ಮೆನ್ ಇನ್ ಬ್ಲೂಗೆ ಸಮಾನವಾಗಿ ವುಮೆನ್ ಇನ್ ಬ್ಲೂ ಹೊರಹೊಮ್ಮಿದೆ. 1887ರಲ್ಲಿ ಇಂಗ್ಲೆಂಡ್‌ನಲ್ಲಿ ಆರಂಭವಾದ ವಿಶ್ವದ ಮೊದಲ ಮಹಿಳಾ ಕ್ರಿಕೆಟ್ ತಂಡ ವೈಟ್ ಹೀದರ್ ಕ್ಲಬ್ ( ) ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲನ್ನು ತಲುಪಿದೆ. ಭಾರತದಲ್ಲಿ 1973ರಲ್ಲಿ ಲಕ್ನೋದಲ್ಲಿ ಮಹಿಳಾ ಕ್ರಿಕೆಟ್ ಅಸೋಸಿಯೇಷನ್ ಆಫ್ ಇಂಡಿಯಾ () ಸ್ಥಾಪನೆಯೊಂದಿಗೆ ಆರಂಭವಾದ ಮಹಿಳಾ ಕ್ರಿಕೆಟ್ ಲೋಕ ಇಂದು ಜಾಗತಿಕವಾಗಿ ತಮ್ಮದೇ ಆದ ಛಾಪು ಮೂಡಿಸಿದೆ.

2025ರ ನವೆಂಬರ್ 2ರಂದು ಭಾರತೀಯ ಮಹಿಳಾ ತಂಡವು ತನ್ನ ಮೊದಲ ವಿಶ್ವಕಪ್ ಮುಕುಟವನ್ನು ಗೆಲ್ಲುವ ಮೂಲಕ ಹೊಸ ಇತಿಹಾಸ ಬರೆದಿದೆ. ಆದರೆ ಈ ದಾರಿ ಅಷ್ಟು ಸುಲಭವಲ್ಲ. ಅಷ್ಟಕ್ಕೂ ಮಹಿಳಾ ಕ್ರಿಕೆಟ್ ಎನ್ನುವುದು ಕೇವಲ ಬ್ಯಾಟ್ ಮತ್ತು ಬಾಲ್ ನಡುವಿನ ಹೋರಾಟವಲ್ಲ. ಪುರುಷರ ತಂಡಕ್ಕಿಂತ ಭಿನ್ನವಾಗಿ, ಹೆಚ್ಚಾಗಿ ದೈಹಿಕ, ಮಾನಸಿಕ ಒತ್ತಡಗಳನ್ನು ಹೊತ್ತು, ಅದರೊಂದಿಗೆ ಜೀವಿಸಿ ತಂಡವನ್ನು ಗೆಲುವಿನತ್ತ ಸಾಗಿಸುವವರು ಮಹಿಳಾ ಕ್ರಿಕೆಟ್ ಆಟಗಾರರು.

ಕ್ರಿಕೆಟ್ ಎಂದಾಗ ಪುರುಷರ ತಂಡವಾಗಲಿ, ಮಹಿಳೆಯರ ತಂಡವಾಗಲಿ ಮಾನಸಿಕ ಒತ್ತಡ, ದೈಹಿಕ ನೋವು ಇದ್ದೇ ಇರುವಂತದ್ದು. ಆದರೆ ಮಹಿಳೆಯರು ಕ್ರಿಕೆಟ್ ಮೈದಾನದಲ್ಲಿ ಮುಟ್ಟಿನೊಂದಿಗೆ ಮೌನ ಕದನವನ್ನೂ ನಡೆಸುವವರು. ಅದರಲ್ಲೂ ಟೆಸ್ಟ್ ಪಂದ್ಯಗಳ ವೇಳೆ ಮೈದಾನದಲ್ಲಿ ಬಿಳಿ ಉಡುಪು ಧರಿಸಿ, ಸಾವಿರಾರು ಪ್ರೇಕ್ಷಕರ ಮುಂದೆ ಓಡುತ್ತಾ, ಡೈವ್ ಹೊಡೆಯುತ್ತಾ ಆಡುವ ಮಹಿಳಾ ಕ್ರಿಕೆಟಿಗರ ಹಿಂದೆ ನಮಗೆ ತಿಳಿಯದ ದೈಹಿಕ ಯಾತನೆಯ ಕಥೆಗಳಿವೆ. ಹೀಗಿರುವಾಗ ಮುಟ್ಟಿನ ನೋವು-ಸಂಕಟಗಳ ನುಂಗಿ, ಕಲೆಗಳಾಗುವ ಭಯದ ನಡುವೆ ಮುನ್ನುಗ್ಗುತ್ತಿರುವ ಮಹಿಳಾ ಕ್ರಿಕೆಟ್ ಕಲಿಗಳಿಗೊಂದು ನಮ್ಮ ಸಲಾಮ್ ಸಲ್ಲಲೇಬೇಕು.

ಮುಟ್ಟಿನ ನೋವನ್ನು ಹೊತ್ತುಕೊಂಡು ಕೆಲಸ ಮಾಡುವುದೆಂದರೆ ಅದು ನರಕ ಸಂಕಟ. ಹೀಗಿರುವಾಗ ಮುಟ್ಟಿನ ನೋವಿನ ನಡುವೆ ಮೈದಾನಕ್ಕೆ ಇಳಿಯಬೇಕಾದ ಅನಿವಾರ್ಯತೆ ಮಹಿಳಾ ಕ್ರಿಕೆಟಿಗರದ್ದು. ಕ್ರೀಡಾಂಗಣದಲ್ಲಿ ಚಾಕಚಕ್ಯತೆಯಿಂದ ಬೌಂಡರಿ ತಡೆಯುವಾಗ ಅಥವಾ ಶತಕ ಬಾರಿಸಿದಾಗ ನಾವು ಮಹಿಳಾ ಕ್ರಿಕೆಟಿಗರ ಪ್ರತಿಭೆಯನ್ನು ಕೊಂಡಾಡುತ್ತೇವೆ. ಆದರೆ ಅದೇ ಸಮಯದಲ್ಲಿ ಅವರ ದೇಹದ ಒಳಗಾಗುತ್ತಿರುವ ಹೋರಾಟದ ಬಗ್ಗೆ ನಮಗೆ ಅರಿವಿರುವುದಿಲ್ಲ. ಮುಟ್ಟಾದ ವೇಳೆ ಇರುವ ಹೊಟ್ಟೆನೋವು, ಬೆನ್ನುನೋವು, ಸುಸ್ತನ್ನು ಬದಿಗೊತ್ತಿ ಸಿಕ್ಸರ್ ಬಾರಿಸುವುದು ಇದೊಂದು ರೀತಿಯ ಮೌನ ಕ್ರಾಂತಿ. ನೋವನ್ನು ಬಚ್ಚಿಟ್ಟು, ಮುಚ್ಚಿಟ್ಟು ಮೈದಾನದಲ್ಲಿ ಅಬ್ಬರಿಸುವವರು ಈ ಮಹಿಳಾ ಕ್ರಿಕೆಟ್ ಕಲಿಗಳು.

ಮುಟ್ಟಿನ ನೋವನ್ನು ತೋಡಿಕೊಂಡ ಆಟಗಾರ್ತಿಯರು

ಈ ನೋವನ್ನು ಹಲವು ಬಾರಿ ಮಹಿಳಾ ಕ್ರಿಕೆಟ್ ಆಟಗಾರರು ನೆನಪಿಸಿಕೊಂಡಿದ್ದಾರೆ. 2009ರಲ್ಲಿ ಭಾರತೀಯ ಕ್ರಿಕೆಟ್ ತಾರೆ ಮಿಥಾಲಿ ರಾಜ್ ಅವರಿಗೆ ವಿಶ್ವಕಪ್ ಪಂದ್ಯವೊಂದರ ಸಂದರ್ಭದಲ್ಲೇ ಮುಟ್ಟಾಗಿ ತೀವ್ರವಾದ ನೋವಿನಿಂದ ನಿಲ್ಲಲೂ ಸಾಧ್ಯವಾಗುತ್ತಿರಲಿಲ್ಲ. ಆದರೂ ತಂಡಕ್ಕಾಗಿ ಮೈದಾನಕ್ಕಿಳಿದು ಅರ್ಧಶತಕ ಬಾರಿಸಿದ್ದರು. ಇದನ್ನು ಕಾರ್ಯಕ್ರಮವೊಂದರಲ್ಲಿ ನೆನಪಿಸಿಕೊಂಡಿದ್ದರು. ಅದೇ ರೀತಿ ಜೆಮಿಮಾ ರೋಡ್ರಿಗಸ್, ಸ್ನೇಹ್ ರಾಣಾ ಇತ್ತೀಚೆಗೆ ಕ್ರಿಕೆಟ್ ಸಂದರ್ಭದಲ್ಲಿ ಮುಟ್ಟಾಗಿ ಉಂಟಾಗುವ ಯಾತನೆ ಬಗ್ಗೆ ಮುಕ್ತವಾಗಿ ಮಾತನಾಡಿದ್ದರು.

''ಮುಟ್ಟಿನ ಸಮಯದಲ್ಲಿ ಹಾರ್ಮೋನ್ ಬದಲಾವಣೆ ಆಗುವುದರಿಂದಾಗಿ ಸ್ನಾಯುಗಳು ಮತ್ತು ಮೂಳೆಗಳು ದುರ್ಬಲಗೊಂಡಂತೆ ಆಗುತ್ತದೆ. 90ರ ದಶಕದಲ್ಲಿ ಮುಟ್ಟಿನ ಬಗ್ಗೆ ಮಾತನಾಡುವುದು ಒಂದು ನಿಷೇಧಿತ ವಿಷಯವಾಗಿತ್ತು. ಸಹ ಆಟಗಾರರೊಂದಿಗೂ ಹಂಚಿಕೊಳ್ಳಲು ಸಾಧ್ಯವಿರಲಿಲ್ಲ'' ಎನ್ನುತ್ತಾರೆ ಮಿಥಾಲಿ ರಾಜ್.

ಮುಟ್ಟಿನ ಸಮಯದಲ್ಲಿ ಕ್ರಿಕೆಟ್ ಆಡುವುದು ಸುಲಭವಲ್ಲ ಎನ್ನುತ್ತಾರೆ ಜೆಮಿಮಾ ರೋಡ್ರಿಗಸ್ ಹೇಳಿದ್ದಾರೆ. ''ನೋವಿನ ಜೊತೆಗೆ ಬಿಳಿ ಬಟ್ಟೆಯ ಮೇಲೆ ಕಲೆ ಉಂಟಾಗುವ ಭಯ ಸದಾ ಇರುತ್ತದೆ. ಇದು ಪುರುಷ ಕ್ರಿಕೆಟಿಗರು ಎದುರಿಸದ ಸವಾಲು. ಕೆಲವು ಆಟಗಾರ್ತಿಯರಿಗೆ ಹೊಟ್ಟೆ ನೋವು ಎಷ್ಟು ತೀವ್ರವಾಗಿರುತ್ತದೆ ಎಂದರೆ ಅವರಿಗೆ ನಡೆಯಲು ಸಹ ಸಾಧ್ಯವಾಗುವುದಿಲ್ಲ. ನೋವು ನಿವಾರಕ ಮಾತ್ರೆ ಸೇವಿಸಿ ದೇಶಕ್ಕಾಗಿ ಆಡುತ್ತಾರೆ'' ಎಂದು ಹಲವು ಬಾರಿ ರೋಡ್ರಿಗಸ್ ಹೇಳಿಕೊಂಡಿದ್ದಾರೆ.

ಅಭಿಯಾನದ ವೇಳೆ ಮಾತನಾಡಿದ್ದ ಮಹಿಳಾ ತಂಡದ ಉಪನಾಯಕಿ ಸ್ಮೃತಿ ಮಂಧಾನ, ''ನಾಲ್ಕೈದು ವರ್ಷಗಳ ಹಿಂದೆ ಈ ವಿಷಯದ ಬಗ್ಗೆ ಮಾತನಾಡಲು ಸಂಕೋಚವಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಈಗ ಆಟಗಾರ್ತಿಯರು ತಮ್ಮ ದೈಹಿಕ ಸ್ಥಿತಿಯ ಬಗ್ಗೆ ಮಂಡಳಿಯ ಸಹಾಯಕ ಸಿಬ್ಬಂದಿಯೊಂದಿಗೆ ಮುಕ್ತವಾಗಿ ಚರ್ಚಿಸುತ್ತಾರೆ. ಇದರಿಂದಾಗಿ ಆಟದ ವೇಳೆ ಹೊಂದಾಣಿಕೆ ಮಾಡಿಕೊಳ್ಳಲು ಸುಲಭವಾಗುತ್ತದೆ'' ಎಂದು ತಿಳಿಸಿದ್ದಾರೆ.

ಇನ್ನು ನಲ್ಲಿ ಮುಟ್ಟಿನ ದಿನಗಳಲ್ಲಿ ತಮ್ಮ ಆಟದ ಬಗ್ಗೆ ವಿವರಿಸಿದ್ದ ಸ್ನೇಹ ರಾಣಾ, ''ತೀವ್ರವಾದ ಹೊಟ್ಟೆನೋವು ಇದ್ದರೂ ಮಾತ್ರೆ ಸೇವಿಸಿ ಪಂದ್ಯವಾಡಬೇಕಾದ ಅನಿವಾರ್ಯತೆ ಇರುತ್ತದೆ. ಮೈದಾನದಲ್ಲಿ ಆಡುವಾಗ ವಿಶ್ರಾಂತಿ ಪಡೆಯುವ ಆಯ್ಕೆ ಇಲ್ಲದಿರುವುದರಿಂದ ಹೀಟ್ ಪ್ಯಾಕ್ ಬಳಸಿ ನೋವು ನಿರ್ವಹಣೆ ಮಾಡಬೇಕಾಗುತ್ತದೆ'' ಎಂದಿದ್ದಾರೆ.

ಕಾಲ ಬದಲಾಗುತ್ತಿದೆ; ಸಂವೇದನೆ ಹೆಚ್ಚುತ್ತಿದೆ, ಆದರೆ

ಒಂದು ಕಾಲದಲ್ಲಿ ಮುಟ್ಟಿನ ಬಗ್ಗೆ ಮಾತನಾಡುವುದೂ ಕಷ್ಟವಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಮಹಿಳೆಯರು ಮುಟ್ಟಿನ ಬಗ್ಗೆ ಮುಕ್ತವಾಗಿ ಮಾತನಾಡಬಹುದಾದ ವಾತಾವರಣವಿದೆ. ಸದ್ಯ ಮಹಿಳಾ ಕ್ರಿಕೆಟಿಗರಿಗಾಗಿ ವಿಶೇಷ ವಿನ್ಯಾಸದ ಒಳ ಉಡುಪುಗಳು ಮತ್ತು ಮುಟ್ಟಿನ ಬಟ್ಟಲಿನಂತಹ ( ) ಅತ್ಯಾಧುನಿಕ ನೈರ್ಮಲ್ಯ ಉತ್ಪನ್ನಗಳು ಲಭ್ಯವಿದೆ.

ಫಿಸಿಯೋಥೆರಪಿಸ್ಟ್‌ಗಳು ಮತ್ತು ತರಬೇತುದಾರರು ಆಟಗಾರ್ತಿಯರ ಮುಟ್ಟಿನ ದಿನಾಂಕಗಳನ್ನು ಗಮನದಲ್ಲಿಟ್ಟುಕೊಂಡು ತರಬೇತಿ ಅವಧಿಗಳನ್ನು ಸರಿಹೊಂದಿಸುತ್ತಾರೆ. ಆದರೆ ಬಿಳಿ ಬಟ್ಟೆ ಧರಿಸಿ ಆಡುವಾಗ ಸೋರುವಿಕೆಯ ಭಯ ಮಹಿಳಾ ಆಟಗಾರ್ತಿಯರಿಗೆ ಸದಾ ಕಾಡುತ್ತದೆ. ಅಷ್ಟು ಮಾತ್ರವಲ್ಲದೆ ಮುಟ್ಟಿನ ಸಮಯದಲ್ಲಿ ದೇಹ ಬೇಗ ಸುಸ್ತಾಗುತ್ತದೆ, ನಿರ್ಜಲೀಕರಣ ಉಂಟಾಗುತ್ತದೆ. ಇವೆಲ್ಲವನ್ನೂ ಆಟಗಾರ್ತಿಯರು ನಿಭಾಯಿಸಿಕೊಂಡು ಹೋಗುತ್ತಿದ್ದಾರೆ.

ಮಹಿಳಾ ಕ್ರಿಕೆಟಿಗರು ಮೈದಾನದಲ್ಲಿ ಚೆಂಡನ್ನು ಬೌಂಡರಿಗಟ್ಟುವ ಪ್ರತಿ ಬಾರಿಯೂ, ಕೇವಲ ತಮ್ಮ ಎದುರಾಳಿ ತಂಡವನ್ನಷ್ಟೇ ಅಲ್ಲ ತಮ್ಮ ಮುಟ್ಟನ್ನು, ಮುಟ್ಟಿನ ನೋವನ್ನೂ ಗೆಲ್ಲುತ್ತಿರುತ್ತಾರೆ. ಕೇವಲ ಆಟಗಾರರಲ್ಲ, ಪ್ರತಿ ತಿಂಗಳೂ ಮೌನವಾಗಿ ಯುದ್ಧ ಗೆಲ್ಲುವ ಯೋಧರೆಂದರೆ ತಪ್ಪಾಗಲಾರದು. ಮಹಿಳಾ ಕ್ರಿಕೆಟಿಗರ, ಇತರೆ ಅಥ್ಲೇಟ್‌ಗಳ ದೃಢ ಸಂಕಲ್ಪಕ್ಕೆ ನಾವು ಮತ್ತೊಮ್ಮೆ, ಮಗದೊಮ್ಮೆ ಸಲಾಮ್ ಹೇಳಲೇಬೇಕು.

ಕ್ರೀಡೆಗಿಂತ ರಾಜಕೀಯವೇ ಮೇಲುಗೈ: ಮೈದಾನದ ಆಟವಾಗಿ ಉಳಿಯದ ಭಾರತ-ಪಾಕ್ ಕ್ರಿಕೆಟ್

ಟಿ20 ವಿಶ್ವಕಪ್‌ನ ಭಾರತ ಪಾಕ್ ಪಂದ್ಯವು ರಾಜಕೀಯ ಮೇಲಾಟಗಳಿಗೆ ವೇದಿಕೆಯಾಯಿತೇ ಹೊರತು, ನೈಜ ಕ್ರಿಕೆಟ್ ಪ್ರೇಮಿಗಳಿಗೆ ಬೇಕಾದ ರೋಚಕತೆಯನ್ನು ನೀಡುವಲ್ಲಿ ವಿಫಲವಾಯಿತು. ಎರಡು ದೇಶಗಳ ನಡುವಿನ ಸಂಬಂಧ ಹಳಸಿರುವಾಗ, ಮೈದಾನದಲ್ಲಿ ಕ್ರೀಡೆ ಸೋತು, ವೇಷ ಮರೆಸಿಕೊಂಡ ಯುದ್ಧ ಗೆದ್ದಂತೆ ಭಾಸವಾಗುತ್ತಿತ್ತು

ಕೊಲಂಬೊದ ಆಕಾಶ ಭಾನುವಾರ ಬೆಳಿಗ್ಗೆಯಿಂದಲೇ ಕಪ್ಪ ಮೋಡಗಳಿಂದ ಆವೃತ್ತವಾಗಿತ್ತು. ಇದು ಕೇವಲ ಹವಾಮಾನದ ಮುನ್ಸೂಚನೆಯಾಗಿರದೆ, ಸಂಜೆ ನಡೆಯಲಿದ್ದ ಭಾರತ ಮತ್ತು ಪಾಕಿಸ್ತಾನ ನಡುವಿನ ಹೈ-ವೋಲ್ಟೇಜ್ ಪಂದ್ಯದ ರಾಜಕೀಯ ವಾತಾವರಣದ ಪ್ರತಿಬಿಂಬದಂತಿತ್ತು. ಕ್ರಿಕೆಟ್ ಜಗತ್ತಿನ ಅತ್ಯಂತ ರೋಚಕ ಪೈಪೋಟಿ ಎಂದು ಕರೆಯಲ್ಪಡುವ ಈ ಪಂದ್ಯದ ಸುತ್ತಲೂ ಕ್ರೀಡೆಗಿಂತ ಹೆಚ್ಚಾಗಿ ರಾಜಕೀಯದ ಕಾರ್ಮೋಡವೇ ಕವಿದಿತ್ತು. ಭಾರತದ ಹೊರಗೆ ಪಂದ್ಯಗಳನ್ನು ಆಡಲು ನಿರಾಕರಿಸಲ್ಪಟ್ಟ ಬಾಂಗ್ಲಾದೇಶವು ವಿಶ್ವಕಪ್‌ನಿಂದ ಹೊರಗುಳಿದಿರುವುದಕ್ಕೆ ಬೆಂಬಲ ಸೂಚಿಸಿ, ಪಾಕಿಸ್ತಾನವು ಈ ಪಂದ್ಯವನ್ನು ಬಹಿಷ್ಕರಿಸುವ ನಿರ್ಧಾರದಿಂದ ಕೊನೆ ಗಳಿಗೆಯಲ್ಲಿ ಹಿಂದೆ ಸರಿದಿತ್ತು. ಹೀಗಾಗಿ, ಪಂದ್ಯ ಆರಂಭಕ್ಕೂ ಮುನ್ನವೇ ಮೈದಾನದ ಹೊರಗಿನ ಬೆಳವಣಿಗೆಗಳು ಹೋರಾಟದ ವಾತಾವರಣವನ್ನು ಸೃಷ್ಟಿಸಿದ್ದವು.

ಭಾನುವಾರದ ಈ ಪಂದ್ಯದಲ್ಲಿ ಕ್ರಿಕೆಟ್‌ಗಿಂತ ಹೆಚ್ಚಾಗಿ ಅಲ್ಲಿನ ಆಚರಣೆಗಳು ಮತ್ತು ಆಟಗಾರರ ಹಾವಭಾವಗಳೇ ಹೆಚ್ಚು ಕುತೂಹಲ ಕೆರಳಿಸಿದ್ದವು. ಇತ್ತೀಚಿನ ರಾಜಕೀಯ ಇತಿಹಾಸದ ಹಿನ್ನೆಲೆಯಲ್ಲಿ ಉಭಯ ತಂಡಗಳ ನಾಯಕರು ಹಸ್ತಲಾಘವ ಮಾಡುತ್ತಾರೆಯೇ ಎಂದು ಜಗತ್ತೇ ಎದುರು ನೋಡುತ್ತಿತ್ತು. ಆದರೆ, ಟಾಸ್ ವೇಳೆ ಸೌಜನ್ಯದ ನಡವಳಿಕೆಗಳು ಮಾಯವಾಗಿದ್ದವು. ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪಾಕಿಸ್ತಾನದ ನಾಯಕ ಸಲ್ಮಾನ್ ಅಲಿ ಅಘಾ ಪರಸ್ಪರ ಮೌನಕ್ಕೆ ಶರಣಾದರು. ಟಾಸ್ ಪ್ರಕ್ರಿಯೆಗಾಗಿ ಕ್ಯಾಮೆರಾಗಳ ಮುಂದೆ ನಿಲ್ಲಬೇಕಾದ ಆ ಎರಡು ನಿಮಿಷಗಳು, ಇಬ್ಬರು ನಾಯಕರ ನಡುವಿನ ಮುಜುಗರದ ಮೌನದಿಂದಾಗಿ ಯುಗಗಳೇ ಕಳೆದಂತೆ ಭಾಸವಾಯಿತು.

ಈಗಿನ ನಾಯಕರು ಮುಖ ತಿರುಗಿಸಿಕೊಂಡು ನಿಂತಿದ್ದರೆ, ಮೈದಾನದ ಹೊರಗೆ ಮಾಜಿ ಆಟಗಾರರ ವರ್ತನೆ ಇದಕ್ಕೆ ತದ್ವಿರುದ್ಧವಾಗಿತ್ತು. ಎರಡೂ ದೇಶಗಳ ಹಿರಿಯ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಾಸಿಂ ಅಕ್ರಮ್ ಆತ್ಮೀಯವಾಗಿ ಟ್ರೋಫಿಯನ್ನು ಮೈದಾನಕ್ಕೆ ತಂದರು. ಕ್ಯಾಮೆರಾ ಕಣ್ಣುಗಳಿಂದ ಆಚೆಗೆ ಹರ್ಭಜನ್ ಸಿಂಗ್, ಮಿಸ್ಬಾ ಉಲ್ ಹಕ್ ಮತ್ತು ರಮೀಜ್ ರಾಜಾ ಅವರು ಗ್ಯಾಲರಿಯಲ್ಲಿ ಸೌಹಾರ್ದಯುತವಾಗಿ ಹರಟುತ್ತಿರುವುದು ಕಂಡುಬಂತು. ನಿವೃತ್ತರಾದ ಬಳಿಕ ದ್ವೇಷ ಕರಗುತ್ತದೆ, ಆದರೆ ಸಮವಸ್ತ್ರದಲ್ಲಿರುವಾಗ ರಾಷ್ಟ್ರಗಳ ಪ್ರತಿಷ್ಠೆಯೇ ಮುಖ್ಯವಾಗುತ್ತದೆ ಎಂಬುದಕ್ಕೆ ಈ ದೃಶ್ಯ ಸಾಕ್ಷಿಯಂತಿತ್ತು.

ಕ್ರೀಡಾಂಗಣದ ಭದ್ರತೆಯು ಇದು ಕೇವಲ ಆಟವಲ್ಲ ಎಂಬುದನ್ನು ಸಾರಿ ಹೇಳುತ್ತಿತ್ತು. ಕ್ರೀಡಾಂಗಣದಿಂದ ಹಲವು ಬ್ಲಾಕ್‌ಗಳಷ್ಟು ದೂರದಲ್ಲೇ ಭದ್ರತಾ ಪರಿಧಿ ನಿರ್ಮಿಸಲಾಗಿತ್ತು. ಲಂಕಾ ವಿಶೇಷ ಟಾಸ್ಕ್ ಫೋರ್ಸ್ ಪಡೆಗಳು ಅತ್ಯಾಧುನಿಕ ಸ್ವಯಂಚಾಲಿತ ಶಸ್ತ್ರಾಸ್ತ್ರಗಳೊಂದಿಗೆ ಸರ್ಪಗಾವಲು ಹಾಕಿದ್ದವು. ಅಭಿಮಾನಿಗಳ ಬ್ಯಾಗ್‌ಗಳನ್ನು ಹಲವು ಹಂತಗಳಲ್ಲಿ ತಪಾಸಣೆ ಮಾಡಲಾಯಿತು. ಇದರ ನಡುವೆಯೂ ಸ್ಥಳೀಯ ವ್ಯಾಪಾರಿಗಳಿಗೆ ಸುಗ್ಗಿ ಕಾಲ. ಆಟಗಾರರು ಧರಿಸುವ ಜೆರ್ಸಿಗಳ ಬೆಲೆ ಗಗನಕ್ಕೇರಿತ್ತು ಮತ್ತು ಹೋಟೆಲ್‌ಗಳು ತುಂಬಿ ತುಳುಕುತ್ತಿದ್ದವು. ಭಾರತದ ಆಟಗಾರ ಮೊಹಮ್ಮದ್ ಸಿರಾಜ್ ಅವರಿಗೆ ಬೆಳಗಿನ ಸಮಯದಲ್ಲಿ ಹೋಟೆಲ್ ಲಿಫ್ಟ್‌ನಲ್ಲಿ ಜಾಗ ಸಿಗದಷ್ಟು ನೂಕುನುಗ್ಗಲು ಉಂಟಾಗಿತ್ತು ಎಂಬುದು ಪಂದ್ಯದ ಮೇಲಿನ ಕ್ರೇಜ್‌ಗೆ ಸಾಕ್ಷಿ.

ಪಂದ್ಯದ ಆರಂಭಕ್ಕೂ ಮುನ್ನ ಮನರಂಜನಾ ಕಾರ್ಯಕ್ರಮದಲ್ಲೂ ರಾಜಕೀಯದ ಛಾಯೆ ಎದ್ದು ಕಾಣುತ್ತಿತ್ತು. ಭಾರತೀಯ ರೋಗರ್ ಹನುಮಾನ್‌ಕೈಂಡ್ ಅವರು ಧುರಂಧರ್ ಚಿತ್ರದ ಹಾಡಿಗೆ ಹೆಜ್ಜೆ ಹಾಕಿದರು. ಮುಖ್ಯ ವಿಶೇಷವೆಂದರೆ, ರಾಜಕೀಯ ಕಾರಣಗಳಿಗಾಗಿ ಈ ಚಿತ್ರವನ್ನು ಪಾಕಿಸ್ತಾನದಲ್ಲಿ ನಿಷೇಧಿಸಲಾಗಿದೆ.

''ಭಾವನೆಗಳು ಹೆಚ್ಚಿರುವುದು ಸಹಜ, ಆದರೆ ನಾವು ಅದನ್ನು ನಿಭಾಯಿಸಬೇಕು,'' ಎಂದು ಪಾಕ್ ನಾಯಕ ಸಲ್ಮಾನ್ ಹೇಳಿದರೆ, ಭಾರತದ ಅಕ್ಷರ್ ಪಟೇಲ್, ''ನಾವು ಇದನ್ನು ಕೇವಲ ಎದುರಾಳಿ ತಂಡವಾಗಿ ನೋಡುತ್ತಿದ್ದೇವೆ,'' ಎಂದು ಹೇಳುವ ಮೂಲಕ ರಾಜಕೀಯದ ಬಣ್ಣ ಬಳಿಯಲು ನಿರಾಕರಿಸಿದರು.

ಅಂತಿಮವಾಗಿ ಮೈದಾನದಲ್ಲಿ ಆಟ ಶುರುವಾದಾಗ, ಭಾರತದ ಇಶಾನ್ ಕಿಶನ್ ಅವರ ಆಕ್ರಮಣಕಾರಿ ಬ್ಯಾಟಿಂಗ್ ಪ್ರೇಕ್ಷಕರನ್ನು ರಂಜಿಸಿತು. ಪಾಕಿಸ್ತಾನದ ಬೌಲರ್ ಉಸ್ಮಾನ್ ತಾರಿಕ್ ಅವರ ವಿಚಿತ್ರ ಬೌಲಿಂಗ್ ಶೈಲಿ ಕ್ರಿಕೆಟ್ ಪ್ರೇಮಿಗಳ ಕುತೂಹಲಕ್ಕೆ ಕಾರಣವಾಯಿತು. ನೆಟ್ಸ್ ನಲ್ಲಿ ತನ್ನ ಶೈಲಿಯನ್ನು ಅನುಕರಿಸಿದ್ದ ಸೂರ್ಯಕುಮಾರ್ ಯಾದವ್ ಅವರನ್ನು ಔಟ್ ಮಾಡಿದಾಗ ತಾರಿಕ್ ವ್ಯಂಗ್ಯವಾಗಿ ತಲೆಬಾಗಿದ್ದು ಬಿಟ್ಟರೆ, ಪಾಕಿಸ್ತಾನದ ಕಡೆಯಿಂದ ಆಟದಲ್ಲಿ ಗೆಲುವನ್ನು ತಮ್ಮತ್ತ ಪಡೆದುಕೊಳ್ಳಲು ಯಾವುದೇ ಗಂಭೀರ ಪ್ರತಿರೋಧ ಕಂಡುಬರಲಿಲ್ಲ.

ಪಾಕಿಸ್ತಾನಕ್ಕೆ ಗೆಲ್ಲಲು 176 ರನ್‌ಗಳ ಗುರಿ ಇತ್ತು. ಇನಿಂಗ್ಸ್



ವಿರಾಮದ ವೇಳೆ ಪಂದ್ಯ ರೋಚಕವಾಗಬಹುದು ಎಂಬ ನಿರೀಕ್ಷೆ ಇತ್ತಾದರೂ, ಭಾರತದ ಬೌಲರ್‌ಗಳು ಅದನ್ನು ಹುಸಿಗೊಳಿಸಿದರು. ಪವರ್‌ಪ್ಲೇನಲ್ಲಿ ಕೇವಲ 39 ರನ್‌ಗಳಿಗೆ 4 ವಿಕೆಟ್ ಕಬಳಿಸುವ ಮೂಲಕ ಭಾರತ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಟಿ20 ವಿಶ್ವಕಪ್‌ಗಳಲ್ಲಿ ಉಭಯ ದೇಶಗಳ ಮುಖಾಮುಖಿಯಲ್ಲಿ ಭಾರತದ ಗೆಲುವಿನ ಅಂತರ ಈಗ 8-1ಕ್ಕೆ ಏರಿದೆ. ಈ ಏಕಪಕ್ಷೀಯ ಫಲಿತಾಂಶವು, ಮೈದಾನದ ಹೊರಗಿನ ರಾಜಕೀಯ ಕಾವು ಮೈದಾನದ ಆಟದಲ್ಲಿ ಉಳಿದಿಲ್ಲ ಎಂಬುದನ್ನು ಸ್ಪಷ್ಟಪಡಿಸಿತು. ಒಂದು ತಂಡವು ಮತ್ತೊಂದು ತಂಡವನ್ನು ನಿರಂತರವಾಗಿ ಸೋಲಿಸುತ್ತಲೇ ಇದ್ದರೆ, ಅಲ್ಲಿ ಪ್ರತಿಸ್ಪರ್ಧೆಗಿಂತ ಬೇಸರವೇ ಹೆಚ್ಚಾಗುತ್ತದೆ.

ಪಂದ್ಯದ ಸೋಲು ಖಚಿತವಾಗುತ್ತಿದ್ದಂತೆ, ಐಸಿಸಿ ಪರದೆಯ ಮೇಲೆ ರೋಹಿತ್ ಮತ್ತು ವಾಸಿಂ ಅಕ್ರಮ್ ಅವರ ಸೌಹಾರ್ದಯುತ ದೃಶ್ಯಗಳನ್ನು ಮರುಪ್ರಸಾರ ಮಾಡಲಾಯಿತು. ''ನಾವೆಲ್ಲರೂ ಚೆನ್ನಾಗಿಯೇ ಇದ್ದೇವೆ'' ಎಂದು ತೋರಿಸುವ ಪ್ರಯತ್ನ ಇದಾಗಿತ್ತಾದರೂ, ವಾಸ್ತವ ಬೇರೆಯೇ ಇತ್ತು. ಪಂದ್ಯ ಮುಗಿದ ಬಳಿಕ ಭಾರತದ ಆಟಗಾರರು ಪಾಕ್ ಆಟಗಾರರೊಂದಿಗೆ ಹಸ್ತಲಾಘವ ಮಾಡಲಿಲ್ಲ ಎಂಬುದು ಗೌರವ ಮತ್ತು ಕ್ರೀಡಾ ಸ್ಫೂರ್ತಿ ಇನ್ನೂ ಮರಳಿಲ್ಲ ಎಂಬುದಕ್ಕೆ ಸಾಕ್ಷಿಯಾಗಿತ್ತು. ರಾಜಕೀಯದ ಹಸ್ತಕ್ಷೇಪವು ಈ ಪೈಪೋಟಿಯನ್ನು ಎಷ್ಟು ಹದಗೆಡಿಸಿದೆ ಎಂದರೆ, ಕನಿಷ್ಠ ಸೌಜನ್ಯಕ್ಕೂ ಇಲ್ಲಿ ಜಾಗವಿಲ್ಲದಂತಾಗಿದೆ.

ಒಟ್ಟಾರೆಯಾಗಿ, ಈ ಪಂದ್ಯವು ರಾಜಕೀಯ ಮೇಲಾಟಗಳಿಗೆ ವೇದಿಕೆಯಾಯಿತೇ ಹೊರತು, ನೈಜ ಕ್ರಿಕೆಟ್ ಪ್ರೇಮಿಗಳಿಗೆ ಬೇಕಾದ ರೋಚಕತೆಯನ್ನು ನೀಡುವಲ್ಲಿ ವಿಫಲವಾಯಿತು. ಎರಡು ದೇಶಗಳ ನಡುವಿನ ಸಂಬಂಧ ಹಳಸಿರುವಾಗ, ಮೈದಾನದಲ್ಲಿ ಕ್ರೀಡೆ ಸೋತು, ವೇಷ ಮರೆಸಿಕೊಂಡ ಯುದ್ಧ ಗೆದ್ದಂತೆ ಭಾಸವಾಗುತ್ತಿತ್ತು. ಈ ಪಂದ್ಯವು ಟೂರ್ನಿಯಲ್ಲಿನ ಅಂಕಗಳಿಗಿಂತ ಹೆಚ್ಚಾಗಿ, ಎರಡು ರಾಷ್ಟ್ರಗಳ ನಡುವಿನ ಅಂತರವನ್ನು ಮತ್ತಷ್ಟು ಹಿಗ್ಗಿಸಿದ ದುರದೃಷ್ಟಕರ ಬೆಳವಣಿಗೆಯಾಗಿ ದಾಖಲಾಯಿತು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR